27TH YEAR OF PUBLICATION. PHONE 728 ಬೆಲೆ: ಎರಡಾಣೆ.

ಪ್ರಭಾತ

ಸಂಪುಟ: ೨೭. ಸಂಚಿಕೆ: ೫೨. 4—2—1962 Vol. XXVII. No. 52.

PRABHAT * KANNADA WEEKLY * MANGALORE

ಲೇಖಾಂಕ ೪೧.

ಮಹಾಭಾರತ ಕಥಾಮೃತ

(ಲೇಖಕ: ಶ್ರೀ ಕೊ.ಶ.ಕಾರಂತ, ಬಿ.ಎ.,ಬಿ.ಎಲ್., ಎಡ್ವೊಕೇಟ್, ಮಂಗಳೂರು.)

ಶಿಶುಪಾಲನ ವಧೆ ಮತ್ತು ಯಜ್ಞಸಮಾಪ್ತಿ

"ಜನಾರ್ದನ! ಆ ನಿನ್ನ ಹೊಗಳು ಭಟ್ಟನು ಹೇಳಿದ ಆ ಪರಾಕ್ರಮವೆಲ್ಲಿ? ಬಾ, ಯುದ್ಧಕ್ಕೆ; ಇದೇ ನನ್ನ ಆಹ್ವಾನ ಮಂತ್ರಣವು. ಪಾಂಡವರೊಡನೆ ನಿನ್ನನ್ನು ಸಂಹರಿಸುವುದಕ್ಕೆ ನಾವೆಲ್ಲರೂ ಬದ್ಧಕಂಕಣರಾಗಿದ್ದೇವೆ.

"ನೀನು ಕಂಸನ ದಾಸನಾಗಿದ್ದಿಯಷ್ಟೆ. ಎಂದೂ ರಾಜನಾಗಿರುವುದಿಲ್ಲ. ಆದ್ದರಿಂದ ರಾಜೋಚಿತ ಅಗ್ರಪೂಜೆಗೆ ನೀನು ಅನಧಿಕಾರಿ. ಕೃಷ್ಣ! ದುರ್ಬುದ್ಧಿ ವಶರಾಗಿ ನಿನ್ನನ್ನು ಪೂಜನೀಯ ಪುರುಷನೆಂದು ಪೂಜಿಸಿಬಿಟ್ಟರು. ಆದ್ದರಿಂದ ಅವರೆಲ್ಲರೂ ನನ್ನಿಂದ ವಧಿಸಲು ಅರ್ಹರಾಗಿರುವರು" ಹೀಗೆಂದು ಶಿಶುಪಾಲನು ಸಮರಕ್ಕೆ ಸಿದ್ಧನಾದನು. ಆಗ ಸಮಸ್ತ ರಾಜರ ಕುರಿತು ಮಧುರವಾಣಿಯಿಂದ ಶ್ರೀ ಕೃಷ್ಣನು ಈ ಪ್ರಕಾರ ಪ್ರತಿನುಡಿದನು, "ಭೂಮಿಪಾಲಕರೆ! ಅಹಂಕಾರವಶರಾಗಿ ನೀವೆಲ್ಲರೂ ಕೂಡಿ ನನ್ನ ಕುರಿತು ಮಾಡಿದ ಈ ದುರ್ವ್ಯವಹಾರವು ಅಕ್ಷಮ್ಯವು. ಸಮಗ್ರ ಅಪರಾಧವನ್ನು ನಾನು ಕ್ಷಮಿಸಲಾರೆನು. ಆ ಶಿಶುಪಾಲನು ಇಂದು ಮರಣವನ್ನು ಬಯಸುತ್ತಿದ್ದಾನೆ. ಹಿಂದೆ ರುಕ್ಮಿಣಿಯನ್ನು ವಿವಾಹವಾಗಬೇಕೆಂದು ಅವಳ ಬಂಧುಬಾಂಧವರನ್ನು ಬೇಡಿದನು. ಆದರೆ 'ನಚ ತಾಂ ಪ್ರಾಪ್ತವಾನ್ ಮೂಢಃ ಶೂದ್ರೋ ವೇದ ಶ್ರುತೀಮಿವ ॥ ೬೫-೧೫ ॥ ಹೇಗೆ ಶೂದ್ರನು ವೇದಮಂತ್ರಗಳನ್ನು ಕೇಳಲಾರನೋ ಹಾಗೆಯೇ ಅವನು ಅಜ್ಞಾನವಶಾತ್ತಾಗಿ ಆಕೆಯನ್ನು ಪಡೆಯದೆಹೋದನು. ಅಂದಿನ ಶಿಷ್ಟನು ಇಂದು ರೇಗುತ್ತಿದ್ದಾನೆ. ಅವನ ಮಾತೆಗೆ ಕೊಟ್ಟ ವಚನಕ್ಕಾಗಿ ಇಷ್ಟು ಕಾಲ ಸಹಿಸುತ್ತಿದ್ದೇನೆ."

ಭಗವಂತನ ಈ ಮಾತನ್ನು ಕೇಳಿ ರಾಜರೆಲ್ಲರೂ ಭಯಗೊಂಡು, ಶಿಶುಪಾಲನನ್ನು ನಿಂದಿಸುತ್ತ ಅವನಿಗೆ "ಧಿಕ್ಕಾರ ಧಿಕ್ಕಾರ" ಎಂದು ತೆಗಳಿದರು.

"ಏನು ಕೃಷ್ಣ, ಗತ ರುಕ್ಮಿಣಿಯ ವಿಚಾರ ನನ್ನನ್ನು ಲಜ್ಜಾಸ್ಪದ ರೀತಿಯಲ್ಲಿ ತೆಗಳುತ್ತಿರುವಿ? ಇನ್ನೊಬ್ಬರಿಗೆ ವಾಗ್ದತ್ತವಾದ ಸ್ತ್ರೀಯನ್ನು ಅಪಹರಿಸಿ ಪತ್ನಿಯಾಗಿ ಸ್ವೀಕರಿಸುವ ನಿನ್ನಂತಹ ಅಧಮ ಪುರುಷರಿರುವರೆ? ಅದನ್ನೂ ಈ ಸತ್ಪುರುಷರ ಸಭೆಯಲ್ಲಿ ವರ್ಣಿಸುವ ನಿನಗೇನೆನ್ನಬೇಕು? ನೀನು ನಮ್ಮ ತಾಯಿಗೆ ಕೊಟ್ಟ ವಚನ ಎಂದು ಮಹತ್ತಾದ ಮಾತನಾಡಿದಿ. ನನ್ನೀ ಅಪರಾಧವನ್ನು ನೀನು ಕ್ಷಮಿಸಬೇಕಾಗಿಲ್ಲ. ನೀನು ಪ್ರಸನ್ನನಾಗಿದ್ದರೇನು? ಕುಪಿತನಾದರೇನು? ನಾನು ಅದನ್ನು ಲಕ್ಷಿಸುವವನಲ್ಲ."

ಶಿಶುಪಾಲನು ಭಗವಾನ್ ಮಧುಸೂದನನನ್ನು ಮನಬಂದಂತೆ ನಿಂದಿಸುತ್ತಿದ್ದಾಗ ದೈತ್ಯಸಂಹಾರಕ ಸುದರ್ಶನಚಕ್ರವನ್ನು ಭಗವಂತನು ಸ್ಮರಿಸಿದನು. ಸ್ಮರಿಸಿದ್ದೇ ತಡ ಆ ಚಕ್ರವು ಮಹಾವೇಗದಿಂದ ಬಂದು ಶ್ರೀ ಕೃಷ್ಣನ ಕೈಸೇರಿತು. ಆಗ ಭಗವಂತನು ಉಚ್ಚ ಸ್ವರದಿಂದ ಹೀಗೆಂದನು:

ಶೃಣ್ವಂತು ಮೇ ಮಹೀಪಾಲಾ
ಯೇನೈತತ್ ಕ್ಷಮಿತಂ ಮಯಾ।
ಅಪರಾದಶತಂ ಕ್ಷಾಮ್ಯಂ ಮಾತುರಸ್ಯೈವ ಯಾಚನೆ ॥ ೨೩
ದತ್ತಂ ಮಯಾ ಯಾ ಚಿತಂ ಚ
ತಾನಿ ಪೂರ್ಣಾನಿಪಾರ್ಥಿವಾಃ।
ಅಧುನಾ ವಧಯಿಷ್ಯಾಮಿ ಪಶ್ಯತಾಂ
ವೋ ಮಹೀಕ್ಷಿತಾವಃ ॥
೨೪-ಅಧ್ಯಾಯ ೪೫

ಉಪಸ್ಥಿತ ಸಮಗ್ರ ಮಹೀಪಾಲರೇ ಕೇಳಿರಿ! ಇವನ ತಾಯಿಯು ಇವನು ಶಿಶುವಿದ್ದಾಗ ಬೇಡಿದಂತೆ ಇವನ ಶತಾಪರಾಧಗಳನ್ನು ಕ್ಷಮಿಸುತ್ತೇನೆಂದು ವರವನ್ನು ಕೊಟ್ಟಿದ್ದೇನು. ಅವನ ಅಪರಾಧಗಳು ನೂರಕ್ಕೆ ಮಿಕ್ಕಿದವು. ಇಷ್ಟರವರೆಗೆ ಕ್ಷಮಿಸಿದೆ. ನೀವು ನೋಡುತ್ತಿರುವಂತೆ ಇವನನ್ನು ಈಗಲೇ ಸಂಹರಿಸುತ್ತೇನೆ."

ಕ್ಷಣಾರ್ಧದಲ್ಲಿ ಸುದರ್ಶನ ಚಕ್ರವು ಅವನ ಶಿರವನ್ನು ಛೇದಿಸಿಬಿಟ್ಟಿತು. ಅವನ ವಜ್ರಕಾಯವು ನೆಲಕ್ಕುರುಳಿತು. ರಾಜರೆಲ್ಲರೂ ಭಯಭೀತರಾಗಿ, ಶ್ರೀಕೃಷ್ಣನನ್ನು ಅಭಿವಂದಿಸಿ ಸ್ತುತಿಸಿದರು. ಪಾಂಡುನಂದನ ಯುಧಿಷ್ಠಿರನು ತನ್ನ ಸಹೋದರರೊಡನೆ ಹೀಗೆ ನುಡಿದನು: "ದಮಘೋಷಪುತ್ರ ವೀರರಾಜ ಶಿಶುಪಾಲನ ಅಂತ್ಯೇಷ್ಟಿ ಸಂಸ್ಕಾರವನ್ನು ಗೌರವಯುಕ್ತವಾಗಿ ಶಾಸ್ತ್ರವಿಧಿಯಂತೆ ನಡೆಯಿಸುವುದು ಧರ್ಮವು! ಆದ್ದರಿಂದ ತಡಮಾಡದೆ ಆ ಕಾರ್ಯವನ್ನು ನೆರವೇರಿಸುವುದಕ್ಕೆ ಸಿದ್ಧಪಡಿಸಿರಿ."

ಶಿಶುಪಾಲನ ಊರ್ಧ್ವದೇಹಿಕ ಕರ್ಮಾಂಗವು ಯಥಾವಿಧಿಯಾಗಿ ನೆರವೇರಿಸಲ್ಪಟ್ಟಿತು. ಆ ಮೇಲೆ ಯುಧಿಷ್ಠಿರನು ನೆರೆದ ರಾಜರ ಸನ್ನಿಧಿಯಲ್ಲಿ ಚೇದಿದೇಶದ ಸಿಂಹಾಸನದಲ್ಲಿ ಅವನ ಪುತ್ರನಿಗೆ ರಾಜ್ಯಪಟ್ಟವನ್ನು ಕಟ್ಟಿದನು. ಈ ಪ್ರಕಾರ ಯಜ್ಞವು ಆರಂಭವಾಯಿತು. ಪ್ರತಿದಿನವು ಶಂಖಧ್ವನಿಯಾದ ಕೂಡಲೇ ಲಕ್ಷ ಸಂಖೆಯಲ್ಲಿ ಎಲ್ಲರಿಗೂ ಸಂತರ್ಪಣೆಯು ನಡೆಯುತ್ತಿತ್ತು. ಎಲ್ಲರೂ ಮೃಷ್ಟಾನ್ನ ಭೋಜನಮಾಡಿ ಸಂತುಷ್ಟರಾದರು.

ಬ್ರಾಹ್ಮಣ ವೇದಶಾಸ್ತ್ರಜ್ಞಾಃ ಕಥಾ
ಶ್ಚಕ್ರುಶ್ಚ ಸರ್ವದಾ।
ರೇಮಿರೇ ಚ ಕಥಾಂತೇ ತು ಸರ್ವೇ
ತಸ್ಮಿನ್ ಮಹಾಕ್ರತೌ ॥

ವೇದಶಾಸ್ತ್ರವನ್ನು ತಿಳಿದ ಬ್ರಾಹ್ಮಣರು ಭೋಜನಾನಂತರ ಧರ್ಮವಿಚಾರ ಕಥಾ ಪ್ರವಚನಗಳನ್ನು ಮಾಡುತ್ತಿದ್ದರು. ಈ ಮಹಾಯಜ್ಞದಲ್ಲಿ ಎಲ್ಲವರೂ ಕಥಾಮೃತವನ್ನು ಪಾನಗೈದು ಸುಖವನ್ನು ಅನುಭವಿಸುತ್ತಿದ್ದರು. ಈ ರಾಜಸೂಯ ಯಜ್ಞದಲ್ಲಿ ಭೀಷ್ಮ, ದ್ರೋಣ ಮತ್ತು ದುರ್ಯೋಧನಾದಿ ಸಮಸ್ತ ಕೌರವರು, ವೃಷ್ಣಿ ವಂಶದವರೆಲ್ಲರೂ, ಪಾಂಚಾಲದ ರಾಜಸೇವಕರು ಸಭಾಕಾರ್ಯದಲ್ಲಿ ನಿಮಗ್ನರಾಗಿ ಬಹುದಕ್ಷತೆಯಿಂದ ನೆರವೇರಿಸಿದರು. ಈ ಪ್ರಕಾರ ಪೂರ್ಣಚಂದ್ರನಂತೆ ಆ ಯಜ್ಞವು ಶೋಭಿಸಿತು. ಎಲ್ಲರೂ ಆನಂದಪರವಶರಾದರು. ರಾಜರು ಒಪ್ಪಿಸಿದ್ದ ರತ್ನ ಮತ್ತು ಧನಕನಕಾದಿಗಳನ್ನು ಯುಧಿಷ್ಠಿರನು ಬ್ರಾಹ್ಮಣರಿಗೆ ಸಮರ್ಪಿಸಿದನು. ಸಹಸ್ರ ಕೋಟಿ ಸುವರ್ಣ ಮುದ್ರಿಕೆಗಳನ್ನು ಧರ್ಮರಾಯನು ಬ್ರಾಹ್ಮಣರಿಗೆ ದಕ್ಷಿಣೆಯಾಗಿ ಕೊಟ್ಟನು. ಈ ಸಂಸಾರದಲ್ಲಿ ಈ ಯಜ್ಞದಂತೆ ಯಾರು ಅಂದಿನ ವರೆಗೆ ಪರಿಪಾಲಿಸಿರುವುದಿಲ್ಲ.

ಯಜ್ಞಾಂತದಲ್ಲಿ ಯುಧಿಷ್ಠಿರನು ಲಕ್ಷ್ಮೀಪತಿ ಭಗವಾನ್ ಶ್ರೀ ಕೃಷ್ಣ ದೇವೇಶ್ವರ ಬಲದೇವ ಮತ್ತು ಕುರುಶ್ರೇಷ್ಠ ಭೀಷ್ಮಾದಿಗಳನ್ನು ಪೂಜಿಸಿದನು. ಯಜ್ಞವು ಈ ಪ್ರಕಾರ ಸಮಾಪ್ತಿಯಾದ ಮೇಲೆ ರಾಜರೆಲ್ಲರನ್ನು ಯಥಾಯೋಗ್ಯ ಮರ್ಯಾದೆಯಿಂದ ಅವರ ಸೀಮೆಯವರೆಗೆ ಆದರಪೂರ್ವಕ ಭೀಮಾದಿ ಸಹೋದರರು ಅಗ್ರಜನ ಆಜ್ಞೆಯಂತೆ ಕಳುಹಿಸಿಕೊಟ್ಟರು. ಆ ಮೇಲೆ ಧರ್ಮರಾಯನು "ಗೋವಿಂದ! ನಿನ್ನ ಕೃಪೆಯಿಂದ ಈ ಶ್ರೇಷ್ಠ ಯಜ್ಞವು ಯಶಸ್ವಿಯಾಗಿ ಸಮಾಪ್ತಿಗೊಂಡಿತು. ನಿನ್ನ ಅನುಗ್ರಹದಿಂದ ಪೃಥ್ವಿಯ ಕ್ಷತ್ರಿಯ ಮಂಡಲವು ನನ್ನ ಚಕ್ರಾಧಿಪತ್ಯಕ್ಕೆ ಅಧೀನರಾದರು. ಉತ್ತಮೋತ್ತಮ ರತ್ನಗಳು ಕಾಣಿಕೆಯಾಗಿ ಬಂದವು. ಅನಘ, ನೀನು ಮಾಡಿದ ಅನುಗ್ರಹವನ್ನು ಈ ನಾಲಿಗೆಯಿಂದ ವರ್ಣಿಸಲು ಅಸಾಧ್ಯವಾಗಿದೆ. ನಿನ್ನನ್ನು ಅಗಲಿ ನಾನೆಂದು ಪ್ರಸನ್ನನಾಗಿರಲಾರೆನು. ನೀನು ಅಪೇಕ್ಷಿಸುವಂತೆ ದ್ವಾರಾವತಿಗೆ ಹೋಗುವ ವಿಚಾರವು ಅಗತ್ಯವೆಂದು ನಾನು ಮನಗೊಂಡಿದ್ದೇನೆ. ಆದರೆ ನಿನ್ನನ್ನಗಲಿ ನಾವು ಬಾಳುವುದೆಂತು." ಆ ಮೇಲೆ ಅವರೆಲ್ಲರೂ ಕುಂತಿಯ ಬಳಿಸಾರ್ದು ಆಕೆಯ ಸಮ್ಮತಿಯನ್ನು ಪಡೆದು ಶ್ರೀ ಕೃಷ್ಣನು ಸುಭದ್ರೆ ಮತ್ತು ದ್ರೌಪದಿಯನ್ನು ಕೇಳಿಕೊಂಡು ದ್ವಾರಕೆಗೆ ಪ್ರಸ್ಥಾನಗೈದನು.

——

ಹೆಜಮಾಡಿ ಬೋರ್ಡು ಹಾ! ಎ! ಶಾಲೆಯ ವರ್ಷೋತ್ಸವವು ತಾ. 27 ರಂದು ದ. ಕ. ಜಿಲ್ಲಾ ಕೊಂಗ್ರೆಸ್ ಅಧ್ಯಕ್ಷ ಶ್ರೀ! ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು.

——

ಪ್ರಭಾತ

ಸಂಪುಟ: ೭೭. ಸಂಚಿಕೆ: ೫೨. 4–2–1962 Vol. XXVII. No. 52.

ನೆಹರುರವರಿಗೆ ಭವ್ಯ ಸ್ವಾಗತನೀಡಬೇಕೆಂದು ಜಿಲ್ಲಾ ಕೊಂಗ್ರೆಸ್ ಅಧ್ಯಕ್ಷರ ವಿನಂತಿ

ನಾಳೆ, (ತಾ. 5) ಸೋಮವಾರ ಸಾಯಂಕಾಲ ವಿಮಾನದಲ್ಲಿ ಮಂಗಳೂರಿಗೆ ಆಗಮಿಸಿ, ಘಂಟೆ 7ಕ್ಕೆ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಲಿರುವ ಪಂಡಿತ ಜವಾಹರಲಾಲ ನೆಹರುಗಳವರಿಗೆ, ಜಿಲ್ಲೆಯ ಜನತೆ, ಅಧಿಕಾಧಿಕ ಸಂಖ್ಯೆಯಲ್ಲಿ ನೆರೆದು ಸ್ವಾಗತನೀಡಬೇಕೆಂದೂ, ಬಜ್ಪೆ ನಿಲ್ದಾಣದಿಂದ ಗುರುಪುರ—ಕದ್ರಿ—ರಸ್ತೆಯಾಗಿ ಬರುತ್ತ, ಕದ್ರಿ ಪ್ರಯಾಣಿಕರ ಬಂಗಲೆಯಲ್ಲಿ ಹತ್ತು ನಿಮಿಷ ವಿಶ್ರಾಂತಿ ಪಡೆದು ಪಂಡಿತಜಿಯವರು ಸೈಂಟ್ ಎಗ್ನೆಸ್ ಕೊಲೇಜ್—ಕಲೆಕ್ಟರರ ಗೇಟ್—ಜ್ಯೋತಿ ಟೊಕಿಸ್—ಬಾವಟೆಗುಡ್ಡೆ—ಸಿಂಡಿಕೇಟ್ ಬೇಂಕ್—ಹಂಪನಕಟ್ಟೆ ದಾರಿಯಾಗಿ ಮೈದಾನಿಗೆ 7ಕ್ಕೆ ತಲಪುವರೆಂದೂ, ತೆರೆದ ಕಾರಿನಲ್ಲೇ ಬರುವರೆಂದೂ, ಬಜ್ಪೆಯಿಂದ ಮಂಗಳೂರು ವರೆಗೆ ದಾರಿಯ ಇಬ್ಬದಿಗಳಲ್ಲೂ ನಿಂತು ಸ್ವಾಗತವೀಯಬೇಕೆಂದೂ, ಜನರು ಶಿಸ್ತಿನಿಂದ, ಮಹಾನ್ ವ್ಯಕ್ತಿಗೆ ಸಲ್ಲಬೇಕಾದ ಗೌರವ ಸಲಿಸಬೇಕೆಂದೂ, ಜಿಲ್ಲಾ ಕೊಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ। ಟಿ. ಎ. ಪೈಯವರು, ಸಾರ್ವಜನಿಕರಲ್ಲಿ ವಿನಂತಿಸಿಕೊಳ್ಳುತ್ತಾರೆ.

ಜಿಲ್ಲೆಯ ಚುನಾವಣಾರಂಗ

ದಕ್ಷಿಣ ಕನ್ನಡ ಜಿಲ್ಲೆಯ ಚುನಾವಣಾರಂಗವು, ಮತದಾನಕ್ಕೆ ಎರಡು ವಾರಗಳು ಉಳಿದಿರುವಾಗಲೇ ಬಿಸಿಯೇರಲಾರಂಭಿಸುವುದು ವಾಡಿಕೆಯಾದರೂ, ಈ ಬಾರಿ, ಸ್ಪರ್ಧಿಸುವ ಎಲ್ಲ ಪಕ್ಷಗಳೂ ಈ ತನಕ ಶಾಂತವಾಗಿ ಆದರೆ ಅವಿರತವಾಗಿ ಕಾರ್ಯಕ್ಕೆ ತೊಡಗಿವೆ. ಇತರ ಕಡೆಗಳಂತೆ ಇಲ್ಲಿಯೂ, ಎಲ್ಲ ಸ್ಥಾನಗಳಿಗೆ ಕೊಂಗ್ರೆಸ್ಸು ಮಾತ್ರ ಹುರಿಯಾಳುಗಳನ್ನು ನಿಲ್ಲಿಸಿದೆ.

ಈ ಬಾರಿ ನಮ್ಮ ಜಿಲ್ಲೆಯಲ್ಲಿ ಅವಿರೋಧ ಆಯ್ಕೆಗಳಿಲ್ಲ. ನೇರ ಸ್ಪರ್ಧೆಯಿರುವ ಒಂದು ಮತದಾರ ಕ್ಷೇತ್ರವನ್ನುಳಿದು, ಇತರ ಕ್ಷೇತ್ರಗಳಲ್ಲಿ ತ್ರಿಕೋಣ ಚತುಷ್ಕೋಣ ಸ್ಪರ್ಧೆಯಿದೆ. ಸ್ವತಂತ್ರ ಪಕ್ಷವು ಪ್ರಥಮತಃ ಚುನಾವಣಾರಂಗಕ್ಕಿಳಿದಿದೆ, ಮತ್ತು ಪ್ರಭಾವಶಾಲಿಗಳನ್ನು ಆರಿಸಿ, ಸ್ಪರ್ಧಿಸುತ್ತಿದೆ. ಜನಸಂಘವೂ ಅಧಿಕಸಂಖ್ಯೆಯಲ್ಲಿ (ಒಂಭತ್ತು) ಸ್ಪರ್ಧಾಳುಗಳನ್ನು ನಿಲ್ಲಿಸಿ, ಶಿಸ್ತಿನಿಂದ ಕಾರ್ಯ ತೊಡಗಿದೆ. ಕಮ್ಯುನಿಸ್ಟರೂ ಸಮರ್ಥರೀತಿಯಲ್ಲಿ ಹೋರಾಟ ಕೊಡಲು ಎಲ್ಲ ಸಿದ್ಧತೆಗಳನ್ನೂ ಮಾಡುತ್ತಿರುವರು.

ಕೊಂಗ್ರೆಸ್ಸಿನ ಕೆಲವು ಆಯ್ಕೆಗಳ ವಿಷಯವಾಗಿ, ನಮ್ಮ ಜಿಲ್ಲೆಯಲ್ಲಿಯೂ, ಇತರ ಕಡೆಗಳಂತೆ ತೀವ್ರ ಅತೃಪ್ತಿಯಿದೆ. ಆದರೆ, ಈ ಅತೃಪ್ತಿಯು ಕಟ್ಟೆಯೊಡೆದು, ಕೊಂಗ್ರೆಸ್ಸಿಗರು ಕೊಂಗ್ರೆಸ್ಸಿಗರನ್ನೇ ಸ್ಪರ್ಧಿಸುವ ಪರಿಸ್ಥಿತಿ ತಲೆದೋರಲಿಲ್ಲ. ಇದಕ್ಕೆ, ಇಲ್ಲಿಯ ಸಮರ್ಥ ಕೊಂಗ್ರೆಸ್ ಮುಖಂಡತ್ವವೇ ಕಾರಣ. ಆಯ್ಕೆಗಳನ್ನು ಮನಸಾ ಅನುಮೋದಿಸದ ಮುಖಂಡರು ಕೊನೆಗೆ, ಸಮಗ್ರ ಕೊಂಗ್ರೆಸ್ಸಿನ ಹಿತದೃಷ್ಟಿಯಿಂದ ಕೊಂಗ್ರೆಸ್ಸು ವಿಜಯಿಯಾಗಬೇಕೆಂಬ ಸದೇಚ್ಛೆಯಿಂದ ತ್ರಿಕರಣಪೂರ್ವಕವಾಗಿ ಸಹಕರಿಸಿ,ತಮ್ಮ ಹುರಿಯಾಳುಗಳ ಬಗ್ಗೆ ಶ್ರಮಿಸುತ್ತಿರುವರು.

ಉಡುಪಿ ಕ್ಷೇತ್ರದಲ್ಲಿ ಕೊನೆಯ ಗಳಿಗೆಯಲ್ಲಾದ ಆಯ್ಕೆಯ ಬಗ್ಗೆ ವಿರೋಧೀ ಪಕ್ಷಗಳವರು ಅನುಚಿತ ಟೀಕೆಗೆ ತೊಡಗಿದ್ದೂ ಉಂಟು. ತಾವು ವಿರೋಧಿಸುತ್ತಿರುವ ಒಂದು ಪ್ರಬಲ ಪಕ್ಷವು ಕೊನೆಗಾದರೂ ಯೋಗ್ಯರೊಬ್ಬರನ್ನು ನಿಲ್ಲಿಸಲು ಸಮರ್ಥವಾಯಿತೆಂಬುದಕ್ಕೆ ಉಂಟಾದ ಕಸಿವಿಸಿಯೇ ಇದಕ್ಕೆ ಮುಖ್ಯ ಕಾರಣವಾಗಿದೆ.

ಈ ವರೆಗಿನ ಕೊಂಗ್ರೆಸ್ ವಿರೋಧೀ ಟೀಕೆಗಳು ಕೊಂಗ್ರೆಸ್ಸಿಗೆ ಹಾನಿಯುಂಟು ಮಾಡುವ ಬದಲಾಗಿ ಸಹಾಯವನ್ನೆ ಮಾಡಿವೆಯೆನ್ನಬೇಕು. ಟೀಕೆಗಳಲ್ಲುಪಯೋಗಿಸಿದ ಶೈಲಿ, ಮಾತುಗಳು, ವಾದ, ಇವೆಲ್ಲವೂ ತರ್ಕಬದ್ಧವೆನ್ನುವುದಕ್ಕಿಂತ ಭಾವನೆಗಳ ವಿಕಾರವೆನ್ನಬೇಕು. ಕೊಂಗ್ರೆಸ್ಸೂ, ತನ್ನ ಪ್ರಚಾರಸಾಧನೆಯಲ್ಲಿ, ಇಂಥ ಧಾಟಿಯನ್ನನುಸರಿಸುವ ಪ್ರಲೋಭನಕ್ಕೆ ಬೀಳುವ ಅಪಾಯವೂ ಇದೆ. ಪ್ರತಿಯೊಂದು ಪಕ್ಷವು ತನ್ನ ಘೋಷಣೆಯೇನೆಂದು ಪ್ರಚುರಪಡಿಸುವಾಗ, ವಾದದಲ್ಲಿ ಇತರ ಪಕ್ಷಗಳನ್ನು ಉಲ್ಲೇಖಿಸದಂತೆ ಸಂಯಮನವಿರಿಸಿಕೊಂಡರೆ; ಮತದಾರರು ತಮ್ಮ ಮತವು ಯಾವ ಪಕ್ಷಕ್ಕೆಂಬುದನ್ನು ತಿಳಿಯಾಗಿ ನಿಶ್ಚಯಿಸುವರು.

—



PHOTO: STUDIO BALCO.

ಜಗದ್ಗುರು ಶ್ರೀ ದ್ವಾರಕಾಪೀಠಾಧೀಶ್ವರ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರು, ಅಹಮದಾಬಾದಿನಲ್ಲಿ ತಾ. 30—1—62ರಿಂದ 3—2—62ರ ವರೆಗೆ ಜರಗುವ ಕೋಟಿ ಹೋಮಯಜ್ಞಕ್ಕಾಗಿ, ಮುಳುಬಾಗಿಲು ಮಠದಿಂದ, ತಾ. 29—1—62ರಲ್ಲಿ ಬಜಪೆಗೆ ಬಂದು, ವಿಮಾನದಲ್ಲಿ, ಮುಂಬಯಿ ಮಾರಿಯಾಗಿ ಅಹಮದಾಬಾದಿಗೆ ತೆರಳಿದರು. ಶ್ರೀ ಜಗದ್ಗುರುಗಳವರು, ತಾ. 14—2—62ನೇ ಮಂಗಳವಾರ ಹಿಂದಿರುಗುವರು. ಶ್ರೀ ಜಗದ್ಗುರುಗಳವರನ್ನು ಬೀಳ್ಕೊಡಲು ವಿಮಾನ ನಿಲ್ದಾಣಕ್ಕೆ ಹಲವರು ಬಂದಿದ್ದರು. ಮಂಗಳೂರಿನ ಶ್ರೀ। ಜಯಂತಿಲಾಲ, ಶ್ರೀ। ಪ್ರವೀಣಕುಮಾರ, ಅಡ್ವೊಕೇಟ ಶ್ರೀ। ಎಂ. ಪಿ. ಕಿಣಿ, 'ಪ್ರಭಾತ' ಸಂಪಾದಕ ಶ್ರೀ। ಕುಡ್ಪಿ ವಾಸುದೇವ ಶೆಣೈ, ಶ್ರೀ। ಜಿ. ರತ್ನಾಕರ ಭಟ್, ಶ್ರೀ। ಕುಡ್ಪಿ ವಿಶ್ವನಾಥ ಆರ್. ಶೆಣೈ, ಶ್ರೀ। ಯೆಲ್ಲೂರು ಬಾಬುರಾವ್, ಶ್ರೀ। ರಮೇಶ ಆಚಾರ್ ಮೊದಲಾದವರು ಶ್ರೀಶ್ರೀಗಳಿಂದ ಆಶೀರ್ವಾದ–ಫಲ–ಮಂತ್ರಾಕ್ಷತೆಗಳನ್ನು ಪಡೆದರು. (ಮೇಲಿನ ಚಿತ್ರದಲ್ಲಿ: ಜಗದ್ಗುರುಗಳವರ ಬಲಕ್ಕಿರುವವರು ಶ್ರೀ। ಕುಡ್ಪಿ ವಿಶ್ವನಾಥ ಆರ್. ಶೆಣೈ, ಎಡಕ್ಕಿರುವವರು ಶ್ರೀ। ಜಿ. ರತ್ನಾಕರ ಭಟ್, ಶ್ರೀ। ಕುಡ್ಪಿ ವಾಸುದೇವ ಶೆಣೈ ಮೊದಲಾದವರು.)

ಸುಹ್ರವರ್ದಿಯವರ ದಸ್ತಗಿರಿ

ಪಾಕಿಸ್ತಾನದ ಮಾಜಿ ಪ್ರಧಾನಸಚಿವ ಶ್ರೀ। ಸುಹ್ರವರ್ದಿಯವರನ್ನು ಕಳೆದವಾರ ಕರಾಚಿಯಲ್ಲಿ ರಾಷ್ಟ್ರಘಾತಕ ಚಟುವಟಿಕೆಗಳ ಅಪಾದನೆಯಲ್ಲಿ ದಸ್ತಗಿರಿಮಾಡಿದ ವಾರ್ತೆಯು, ಅಲ್ಲಿ ನಿರಂಕುಶಪ್ರಭುತ್ವವು ಸದ್ಯಃ ಸ್ಥಿರವಾಗಿದೆಯೆಂಬುದನ್ನು ಸೂಚಿಸುತ್ತಿದೆ. ಜ್ಯಾರಿಗೆ ಬರಲಿರುವ, ಸದ್ಯದಲ್ಲೆ ಪ್ರಕಟವಾಗುವ, ಹೊಸ ರಾಜ್ಯಾಂಗಘಟನೆಯು ರಾಷ್ಟ್ರಾಧ್ಯಕ್ಷರ ಅಧಿಕಾರಗಳನ್ನು ಅಮಿತವಾಗಿರಿಸಿದೆಯೆಂದೂ, ವಾಕ್ಸ್ವಾತಂತ್ರ್ಯಾದಿ ಪ್ರಾಮುಖ್ಯ ಸ್ವಾತಂತ್ರ್ಯಗಳನ್ನು ಹತ್ತಿಕ್ಕುವ ಪ್ರಚಲಿತಪ್ರಭುತ್ವವನ್ನು ಬಲಗೊಳಿಸಲು ಸಹಾಯಕವಾಗಿಯೇ ಈ ಭಾವೀಘಟನೆಯು ರೂಪಿಸಲ್ಪಟ್ಟಿದೆಯೆಂದೂ ಅಂಬೋಣವಿದೆ. ಪೂರ್ವ ಪಾಕಿಸ್ತಾನದ ಜನಸಂಖ್ಯೆಯು ಸಮಗ್ರ ಪಾಕಿಸ್ತಾನದ ಪ್ರಜಾಸಂಖ್ಯೆಯಲ್ಲಿ ಅರೆಪಾಲಿಗಿಂತಲೂ ಹೆಚ್ಚು; ಹಾಗೆಯೇ ಪೂರ್ವ ಪಾಕಿಸ್ತಾನದಿಂದ ಆಗುವ ನಿರ್ಯಾತವು ಆ ರಾಷ್ಟ್ರದ ಜುಮ್ಲಾ ಆಯಾತದಲ್ಲಿ ಐದನೇ ನಾಲ್ಕಂಶದಷ್ಟು. ಹೀಗಿದ್ದೂ, ಈ ನಿರ್ಯಾತದಿಂದ ಬರುವ ಆಯದಲ್ಲಿ ಪೂರ್ವ ಪಾಕಿಸ್ಥಾನವು ಅರ್ಧದಷ್ಟನ್ನು ಕೂಡ ಪಡೆಯುತ್ತಿಲ್ಲವೆಂದು ದೂರು ಇದೆ. ರಾಷ್ಟ್ರದೊಳಗಿನ ಈ ಪ್ರಾಮುಖ್ಯ ಪ್ರದೇಶದ ಅತೃಪ್ತಿಯನ್ನು, ರಾಜಕೀಯ ಚಟುವಟಿಕೆಗಳನು ಒತ್ತಿಡುವುದರಿಂದಲೇ ಸದ್ದಡಗಿಸಬಹುದೆಂದು ಪಾಕಿಸ್ತಾನದ ಪ್ರಭುಗಳು ನಂಬಿದಂತಿದೆ. ಸುಹ್ರವರ್ದಿಯವರು ಪೂರ್ವ ಪಾಕಿಸ್ಥಾನದಲ್ಲಿ ಸಾಕಷ್ಟು ವರ್ಚಸ್ಸುಳ್ಳವರು; ಇವರ ಬಂಧನವೇ ಇತರ ಚಳವಳಗಾರರಿಗೆ ಒಂದು ಎಚ್ಚರಿಕೆಯೆಂಬಂತಿದೆ. ಬರಲಿರುವ ಘಟನೆಯು ಹೇಗೂ ಇರಲಿ, ಪಾಕಿಸ್ತಾನದ ಜನತೆಯು ನಿರಂಕುಶಪ್ರಭುತ್ವದಡಿಯೇ ಬಹುಕಾಲ ಮುಂದರಿಯಬೇಕಾಗಿದೆಯೆಂಬ ಸ್ಪಷ್ಟಚಿತ್ರ ಮೂಡುತ್ತಿದೆ.

—

ಕೊಂಕಣ ರೈಲ್ವೆ

ಕೊಂಕಣ ಕರಾವಳಿಗೆ ರೈಲುದಾರಿಯ ಆವಶ್ಯಕತೆಯನ್ನು ಇಂದಿಗೆ ಅರುವತ್ತೈದು ವರ್ಷಗಳಿಗೆ ಹಿಂದೇ ಕಂಡುಕೊಂಡರೂ ಆಗ ಅಲಕ್ಷಿಸಿ, ಮತ್ತೆ 1920ರಲ್ಲಿ ಒಮ್ಮೆ ರೈಲ್ವೆ ಬೋರ್ಡು ಸರ್ವೆ ನಡೆಸಿ ವರದಿಯೊಪ್ಪಿಸಿತ್ತು. ಆದರೂ, ಈ ರೈಲ್ವೆಯು ಕನಸಾಗಿಯೇ ಉಳಿಯಿತು. ಕಳೆದವಾರ, ಈ ರೈಲ್ವೆರಚನೆಯ ಆರಂಭೋತ್ಸವವು, ಕೇಂದ್ರದ ರೈಲ್ವೆ ಮಂತ್ರಿ ಶ್ರೀ। ಜಗಜ್ಜೀವನರಾಮರವರಿಂದ,ಮುಂಬಯಿ ಬಳಿಯ ಪನವೇಲದಲ್ಲಿ ನೆರವೇರಿತು. ಸದ್ಯಃ ಈ ರೈಲ್ವೆ, ದಿವಾದಿಂದ ಪನವೇಲಿಗೂ, ಅಲ್ಲಿಂದ ಆಪ್ಟಾ ವರೆಗೂ ಮುಂದರಿವುದು. ಈ 44 ಮೈಲುಗಳ ಯೋಜನೆಗೆ ಮೂರು ಕೋಟಿ 95 ಲಕ್ಷ ರೂಪಾಯಿ ವ್ಯಯವಾಗುವುದು; ಮೂರು ವರ್ಷಗಳಲ್ಲಿ ಕಾರ್ಯವು ಕೊನೆಗೊಳ್ಳುವುದು. ಇಷ್ಟು ದಾರಿಯಲ್ಲಿ ಸುಮಾರು ಎಂಟು ದೊಡ್ಡ ಮತ್ತು 146 ಚಿಕ್ಕ ಸೇತುವೆಗಳನ್ನು ರಚಿಸಬೇಕಾಗುವುದು. ಕೊಂಕಣ ಕರಾವಳಿಯ ರೈಲ್ವೆ ವಿಸ್ತರಣೆಯಲ್ಲಿ ಇಷ್ಟು ತಡವಾಗಿಯಾದರೂ ಆರಂಭವಾದ ಈ ಕಾರ್ಯವು, ಮುಂದರಿಯುತ್ತ ಮುಂಬಯಿ–ಮಂಗಳೂರು ಕರಾವಳಿ ರೈಲ್ವೆಯು ಪೂರ್ಣಗೊಳ್ಳುವಂತೆ ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಾದರೂ ಹಣವೊದಗಿಸಿಕೊಳ್ಳುವಂತೆ ಸರಕಾರವನ್ನು ಒತ್ತಾಯಿಸಬೇಕಾಗಿದೆ.

—

ಅಷ್ಟಗ್ರಹಯೋಗ ಅರಿಷ್ಟಭಯ

ಮಹಾನಗರಗಳಲ್ಲಿ, ವಣಿಜರು ವಿಮೆಯಿಳಿಸುತ್ತಿರುವರು

ಇದೇ ತಾ. 3ರಿಂದ 5ರ ವರೆಗೆ ಸಂಭವಿಸುವ ಅಷ್ಟಗ್ರಹಯೋಗದ ದುಷ್ಪರಿಣಾಮಗಳಿಗೆ ಭಯಪಟ್ಟು, ಮುಂಬಯಿ, ಕಲ್ಕತ್ತ ಮೊದಲಾದ ಮಹಾನಗರಗಳಲ್ಲಿ ದೊಡ್ಡ ಪ್ರಮಾಣದ ವ್ಯಾಪಾರವಹಿವಾಟುಗಳು ತತ್ಕಾಲಕ್ಕೆ ಸ್ತಬ್ಧಗೊಂಡಿವೆಯಾಗಿ ವರದಿಯಿದೆ.

ಬಾವುಕಮನೋವೃತ್ತಿಯ ಹಲವು ಹಿಂದೂ ವ್ಯಾಪಾರಸ್ಥರು ಗಾಬರಿಗೊಂಡಂತೆ ತೋರುತ್ತದೆ. ಹೊಸ ವ್ಯಾಪಾರವು ನಿಲ್ಲಿಸಲ್ಪಟ್ಟಿದೆ. ಅನೇಕರು, ಭೂಕಂಪ, ನೆರೆ, ಸುಂಟರಗಾಳಿ, ಮತ್ತು ಅಗ್ನಿಯ ಭಯದಿಂದ ತಮ್ಮ ಆಸ್ತಿಪಾಸ್ತಿಗಳಿಗೂ ಸರಕುಗಳಿಗೂ ವಿಮೆಯಿಳಿಸಹತ್ತಿರುವರು. ಭೂಕಂಪ, ಪ್ರವಾಹ ಮೊದಲಾದುವುಗಳ ಅಪಾಯದ ಬಗ್ಗೆ ಸರಕುಗಳಿಗೆ ವಿಮೆಯಿಳಿಸುವುದಿದ್ದರೆ, ಸಾವಿರ ರೂಪಾಯಿ ಮೌಲ್ಯದ ವಸ್ತುಗಳಿಗೆ ಎರಡೂವರೆ ರೂಪಾಯಿ ಪ್ರೀಮಿಯಮ್ ಇರುತ್ತದೆ; ಮತ್ತು ಇದು ಒಂದು ತಿಂಗಳ ಅವಧಿ ಬಗ್ಗೆ ಸ್ವೀಕರಿಸಲಾಗುತ್ತಿದೆ.

ಹುಂಡಿ ಮೇಲೆ ಆಗಾಗ್ಗೆ ಹಣಪಡೆದು ವ್ಯಾಪಾರ ನಡೆಸುವ ಸಣ್ಣ ವ್ಯಾಪಾರಸ್ಥರು ಈ ಅಷ್ಟಗ್ರಹಯೋಗ ದಿನಗಳಲ್ಲಿ ಸಾಲಪಡೆಯಲಾರದೆ ಕಷ್ಟಾನುಭವ ಮಾಡುತ್ತಿದ್ದಾರೆ.

ಭೂಕಂಪದಂತಹ ಅನಾಹುತಗಳಾದರೆ, ತಮ್ಮ ಧನಸಂಪತ್ತಿನಲ್ಲಿ ಒಂದಂಶವಾದರೂ ಉಳಿಯಲಿ ಎಂಬ ಆಸೆಯಿಂದ ಕೆಲವು ಧನಾಢ್ಯರು, ತಮ್ಮೊಡನಿರುವ ದ್ರವ್ಯವನ್ನು ಅನೇಕ ಕಡೆಗಳಲ್ಲಿ ಹಂಚಿ ಇಟ್ಟಿರುತ್ತಾರೆಂದೂ ವರದಿಗಳಿವೆ.

ಅಷ್ಟಗ್ರಹಯೋಗದಿಂದ ಸಂಭವಿಸಬಹುದೆನ್ನಲಾದ ಅರಿಷ್ಟಗಳ ನಿವಾರಣೆಗೆ ಶಾಂತಿಯಜ್ಞಗಳು, ಭಾರತದ ಎಲ್ಲ ಪಟ್ಟಣಗಳಲ್ಲೆಂಬಂತೆ ನಡೆದಿವೆ.

ಕೆನರಾ ಬೇಂಕ್ ಲಿಮಿಟೆಡ್

1961ನೇ ವರ್ಷದ ಗಣನೀಯ ಪ್ರಗತಿ

ಕೆನರಾ ಬೇಂಕ್ ಲಿಮಿಟೆಡ್ — ಈ ಬೇಂಕಿಂಗ್ ಸಂಸ್ಥೆಯು 1961ನೇ ದಶಂಬರ ತಾ. 31ಕ್ಕೆ ಅಂತ್ಯವಾಗುವ ವರ್ಷದ ಕಾರ್ಯಕಲಾಪಗಳು, ತೆರಿಗೆ ಇತ್ಯಾದಿಗಳಿಗೆ ಹಣವನ್ನು ಮೀಸಲಾಗಿಟ್ಟು, ರೂ. 21·24 ಲಕ್ಷದಷ್ಟು ಏನ್ ಮುನಾಫೆಯನ್ನು ತೋರಿದೆ. (ಅದರ ಹಿಂದಣ ವರ್ಷದ ಏನ್ ಮುನಾಫೆ ರೂ. 20·30 ಲಕ್ಷವಾಗಿತ್ತು.)

ಕಳೆದ ವರ್ಷ ಮುಂದಕ್ಕೊಯ್ಯಲ್ಪಟ್ಟ ಉಳಿಕೆಯು 0·45 ಲಕ್ಷ ಕೂಡಿ ಈ ಏನ್ ಮುನಾಫೆ ರೂ.21·69 ಲಕ್ಷ ಆಗುವುದು. ಈ ಮೊತ್ತದಲ್ಲಿ, ಬೇಂಕಿನ ಡೈರೆಕ್ಟರು ರೂ. 6·70 ಲಕ್ಷವನ್ನು ಸ್ಟೆಚುಟರಿ ರಿಸರ್ವಿಗೆ (ಕ್ಷೇಮನಿಧಿಗೆ) ಮೀಸಲಿಡಲು ಸೂಚಿಸುತ್ತಾರೆ. ಷೇರು ಪ್ರಿಮಿಯಮ್ ಖಾತೆಯ ರೂ. 6·30 ಲಕ್ಷ ಸೇರಿ ಈಗ ಕ್ಷೇಮನಿಧಿಯು ರೂ 63 ಲಕ್ಷವಿದೆ; ರೂ. 0·62 ಲಕ್ಷವನ್ನು ಪ್ರಿಫರೆನ್ಸ್ ಷೇರುಹೋಲ್ಡರರಿಗೆ ಸೇಕಡಾ 5ರಂತೆ ಡಿವಿಡೆಂಡಿಗೆ (ಕಳೆದ ವರ್ಷವೂ ರೂ. 0·62 ಲಕ್ಷ); ರೂ. 5·40 ಲಕ್ಷ ಇಕ್ವಿಟಿ ಷೇರ್‌ಹೋಲ್ಡರರಿಗೆ ಸೇಕಡಾ 15ರಂತೆ ಡಿವಿಡೆಂಡಿಗೆ (ಕಳೆದ ವರ್ಷ ಕೂಡ ರೂ. 5·40 ಲಕ್ಷ); ಸಾದಿಲ್ವಾರು—ರೂ.4 50 ಲಕ್ಷ. (ಕಳೆದ ವರ್ಷ ರೂ. 3·50 ಅಂತರಿಕ ಕ್ಷೇಮನಿಧಿಗೆ); ಮತ್ತು ರೂ. 4·00 ಲಕ್ಷ—ಸಿಬಂಧಿಗೆ ಬೋನಸ್ಸಿಗೆ. (ಕಳೆದ ವರ್ಷ ರೂ. 3·10 ಲಕ್ಷ); ಈ ಖರ್ಚುಗಳು ಹೋಗಿ ಉಳಿವ ಮೊಬಲಗು ರೂ. 0·47 ಲಕ್ಷವನ್ನು ಮುಂದಿನ ವರ್ಷದ ಲೆಕ್ಕಕ್ಕೊಯ್ಯಲಾಗುವುದು.

ವರದಿಯ ವರುಷಾಂತ್ಯದಲ್ಲಿ ಬೇಂಕಿನ ಠೇವಣೆಗಳು ರೂ. 37·56 ಕೋಟಿ. ಇದು, ಹಿಂದಣ ವರ್ಷಕ್ಕಿಂತ ರೂ. 6·74 ಕೋಟಿಗಳಷ್ಟು ಹೆಚ್ಚಳ ತೋರಿಸುತ್ತದೆ; ಒಟ್ಟು ಕೊಟ್ಟ ಸಾಲಗಳ ಮೊಬಲಗು ರೂ. 20·39 ಕೋಟಿ — ಇದು, ರೂ. 3·76 ಕೋಟಿಗಳಷ್ಟು ಹೆಚ್ಚಳ ಅಂದರೆ ಸೇಕಡಾ 22·6ರಷ್ಟು ಹೆಚ್ಚಳವಾಗಿದೆ. ಎಂದಿನಂತೆ, ಠೇವಣೆಗಳಿಗದುರಾಗಿ ಕೊಟ್ಟ ಸಾಲಗಳ ಪ್ರಮಾಣವು ಸೇಕಡಾ 54·3ರಷ್ಟು.

ನಮ್ಮ ಜಿಲ್ಲೆ

ಬೆಳ್ಳಿಹಬ್ಬ: ಕೆನರಾ ಬೆಂಕಿಂಗ್ ಕೊರ್ಪೊರೇಶನಿನ ಶಿರ್ವ ಶಾಖೆಯ ಬೆಳ್ಳಿಹಬ್ಬದ ಮಹೋತ್ಸವವು ಮಂಗಳೂರಿನ ಬಿಶಪರಾದ ರೈಟ್ ರೆವರೆಂಡ್ ಡಾ| ರೈಮಂಡ್ ಡಿ'ಮೆಲ್ಲೋರವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿತು. ಪ್ರಾರ್ಥನೆಯಾದ ಮೇಲೆ ಬೆಂಕಿನ ಅಧ್ಯಕ್ಷ ಶ್ರೀ| ಉಳ್ಳಾಲ ಗೋಪಾಲಕೃಷ್ಣ ನಾಯ್ಕರು ಸ್ವಾಗತ ಭಾಷಣಮಾಡಿದರು. ಫಾದರ್ ಗೊನ್ಸಾಲ್ವಿಸ್ ಮತ್ತು ಶಿರ್ವ ಪಂಚಾಯ್ತು ಬೋರ್ಡು ಅಧ್ಯಕ್ಷ ಶ್ರೀ| ವೆಂಕಟ್ರಮಣ ಕಾಮತರು ಬೆಂಕು ಕಳೆದ 25 ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಶ್ಲಾಘಿಸಿ ಮಾತನಾಡಿದರು. ಬೆಂಕಿನ ಡೈರೆಕ್ಟರರಲ್ಲೊಬ್ಬರಾಗಿರುವ ಶ್ರೀ| ಎಫ್. ಎಕ್ಸ್. ಡಿ. ಪಿಂಟೋರವರು ಅವರ ಭಾಷಣಗಳಿಗೆ ಸಮರ್ಪಕವಾದ ಉತ್ತರವಿತ್ತರು. ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಹಾಜರಿದ್ದ ಮೈಸೂರು ಸರಕಾರದ ಕಾನೂನು ಮಂತ್ರಿ ಶ್ರೀ| ಬಿ. ವೈಕುಂಠ ಬಾಳಿಗರು ತನಗೂ ಈ ಬೆಂಕಿಗೂ ಇದ್ದ ದೀರ್ಘಕಾಲದ ಸಂಬಂಧದ ಕುರಿತು ವಿವರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬೆಂಕಿನ ಪ್ರಗತಿಗೆ ಕಾರಣರಾದವರೆಲ್ಲರನ್ನೂ ಅಭಿನಂದಿಸಿ, ಜನತೆಯ ಉಳಿತಾಯ ಬೆಂಕುಗಳಲ್ಲಿ ಭದ್ರವಾಗಿ ಶೇಖರಿಸುವಂತಾಗಬೇಕೆಂದು, ಶಿರ್ವ ಶಾಖೆಗೆ ಉತ್ತರೋತ್ತರ ಅಭಿವೃದ್ಧಿ ಕೋರಿ ಹರಸಿದರು. ಬೆಂಕಿನ ಡೆಪ್ಯೂಟಿ ಮೆನೇಜರ್ ಶ್ರೀ| ಕೆ. ಎಸ್. ಶೆಣೈಯವರು ಧನ್ಯವಾದಗಳನ್ನಿತ್ತ ಮೇಲೆ ರಾಷ್ಟ್ರಗೀತೆಯೊಂದಿಗೆ ಸಮಾರಂಭ ಅಂತ್ಯವಾಯಿತು.

'ಜನತಾವಾಣಿ' ಉದ್ಘಾಟನೆ: ಮಂಗಳೂರು ಜನತಾ ಶಿಕ್ಷಣ ನಿಲಯದ 'ಜನತಾವಾಣಿ' ದ್ವಿತೀಯ ಸಂಪುಟದ ಉದ್ಘಾಟನಾ ಸಮಾರಂಭವು ತಾ. 28 ರಂದು ಬೆಳಗ್ಗೆ ಗಣಪತಿ ಹೈಸ್ಕೂಲಿನ ಶಾರದಾಸದನದಲ್ಲಿ ಶ್ರೀ| ಎಸ್. ನರಸಪ್ಪಯ್ಯ, ಎಂ. ಎಲ್. ಸಿ ರವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಬಿ. ಇ. ಎಂ. ಹೈಸ್ಕೂಲ್ ಹಳೇ ವಿದ್ಯಾರ್ಥಿ ಸಂಘ: ಮಂಗಳೂರು ಬಿ. ಇ. ಎಂ. ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದ ನೂತನ ಕಾರ್ಯಕಾರಿ ಮಂಡಲದ ಪ್ರಥಮ ಸಭೆಯು ಕಳೆದ ತಾ. 29ನೇ ಸೋಮವಾರ ಸಾಯಂಕಾಲ ಶಾಲೆಯ ಸೆಂಟಿನರಿಸದನದಲ್ಲಿ ಅಧ್ಯಕ್ಷ ಶ್ರೀ| ಎ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ ಈ ಕೆಳಗಿನವರು ಅಧಿಕಾರಿಗಳಾಗಿ ಆಯ್ಕೆಹೊಂದಿರುವರು: ಶ್ರೀ|ಗಳಾದ ಟಿ. ಎ. ಕೆ. ಅಸಾದಿ, ಕೆ. ವಿಟ್ಠಲ ಭಂಡಾರಿ ಮತ್ತು ಬಿ. ಶಿವರಾಯ ಪೈ—ಉಪಾಧ್ಯಕ್ಷರು, ಎಂ. ಕೃಷ್ಣಗೋಪಾಲ್—ಪ್ರಧಾನ ಕಾರ್ಯದರ್ಶಿ, ಎಂ. ಮಾಧವ, ಕುಮಾರಿ ಎಡಿತ್ ಐವಿ ಅಂಜೆನ್—ಜೊತೆಕಾರ್ಯದರ್ಶಿಗಳು, ಎಂ. ಅನಂತ ಪ್ರಭು—ಕೋಶಾಧ್ಯಕ್ಷ.

ಪ್ರಜಾಪ್ರಭುತ್ವ ದಿನಾಚರಣೆ: ಮಂಗಳೂರು ತಾಲೂಕು ಕೊಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಪ್ರಜಾಪ್ರಭುತ್ವ ದಿನವು ತಾ. 26ರಂದು ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಅಂದು ಸಂಜೆ ಕೇಂದ್ರ ಮೈದಾನಿನಲ್ಲಿ ಮಂಗಳೂರು ನಗರಸಭಾಪತಿ ಶ್ರೀ| ಮಣೇಲ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ|ಗಳಾದ ಕೆ. ಸೂರ್ಯನಾರಾಯಣ ಅಡಿಗ, ಎಸ್. ಎನ್. ಹೊಳ್ಳ, ಬಿ. ಎಂ. ಇದಿನಬ್ಬ ಮೊದಲಾದವರು ಸಂದರ್ಭೋಚಿತ ಭಾಷಣಗಳನ್ನು ಮಾಡಿದ್ದರು. ಶ್ರೀ| ಎ. ಶಂಕರಾಳ್ವರು ಸ್ವಾಗತಿಸಿ ಕೊನೆಯಲ್ಲಿ ಶ್ರೀ| ಬಿ. ನಾರಾಯಣರಾಯರು ಧನ್ಯವಾದಗಳನ್ನರ್ಪಿಸಿದ್ದರು.

ಪ್ರಜಾರಾಜ್ಯ ದಿನೋತ್ಸವ ಸಂಬಂಧವಾಗಿ ಮಂಗಳೂರು ಸರಕಾರೀ ಕೊಲೆಜಿನಲ್ಲಿ ಮೈಸೂರು ಸಂಗೀತ ನಾಟಕ ಅಕಾಡಮಿ, ದ. ಕ. ಜಿಲ್ಲಾ ಶಾಖೆಯ ಆಶ್ರಯದಲ್ಲಿ ಸಂಗೀತ, ನೃತ್ಯಗಳ ಕಾರ್ಯಕ್ರಮವು, ಬೆಳಗ್ಗೆ ಕೇಂದ್ರ ಮೈದಾನಿನಲ್ಲಿ ಜಿಲ್ಲಾಧಿಕಾರಿಗಳಿಂದ ಧ್ವಜಾರೋಹಣ, ಪೋಲೀಸ್, ಎನ್. ಸಿ. ಸಿ, ಎ. ಸಿ. ಸಿ. ಸ್ಕೌಟ್ ದಳಗಳ ಪೆರೇಡ್ ಇತ್ಯಾದಿ ಕಾರ್ಯಕ್ರಮಗಳೆದುವು.

ಟೆನ್ನಿಸ್: ಮಂಗಳೂರು ಬಾಲಮಾರುತಿ ಓಪನ್ ಟೆನ್ನಿಸ್ ಪಂದ್ಯಾಟದ ಸಿಂಗಲ್ಸ್ ಫೈನಲಿನಲ್ಲಿ ಶ್ರೀ| ಎ. ಟಿ ಶೆಣೈಯವರು ಶ್ರೀ| ವಿಜಾರ್ ಸದಾನಂದ ಪೈಯವರನ್ನು ಸೋಲಿಸಿ ಎರಡನೆಯ ವರ್ಷವೂ ಅನುಕ್ರಮವಾಗಿ ಸಿಂಗಲ್ಸ್ ಪ್ರಶಸ್ತಿಯನ್ನು ಪಡೆದರು. ಡಬ್ಬಲ್ಸ್ ಫೈನಲಿನಲ್ಲಿ ಶ್ರೀ| ಎ. ಟಿ. ಶೆಣೈ ಮತ್ತು ಬಸ್ತಿ ವಾಮನ ಶೆಣೈಯವರು ಶ್ರೀ| ವಿಜಾರ್ ಸದಾನಂದ ಪೈ ಮತ್ತು ಮೋಹನ್ ನಾಯ್ಕರನ್ನು ಸೋಲಿಸಿ ಪ್ರಶಸ್ತಿ ಪಡೆದರು.

ಕೊಂಗ್ರೆಸ್ಸಿಗೆ ಬೆಂಬಲ ನೀಡಲು ಜಿಲ್ಲಾ ಕೊಂಗ್ರೆಸ್ ಅಧ್ಯಕ್ಷರ ಕರೆ: ದ. ಕ. ಜಿಲ್ಲಾ ಕೊಂಗ್ರೆಸ್ ಅಧ್ಯಕ್ಷ ಶ್ರೀ| ಟಿ. ಎ. ಪೈಯವರು ಒಂದು ಪತ್ರಿಕಾ ಪ್ರಕಟಣೆಯಲ್ಲಿ ಕೊಂಗ್ರೆಸ್ ಕಾರಕೀರ್ದಿಯಲ್ಲಿ ದ. ಕ. ಜಿಲ್ಲೆಯಲ್ಲಾದ ಅಭಿವೃದ್ಧಿ ಕಾರ್ಯಗಳೂ ಮುಂದಿನ ಐದು ವರ್ಷಗಳಲ್ಲಾಗಬೇಕಾದ ಕಾರ್ಯಕ್ರಮಗಳು ಇವುಗಳ ಕುರಿತು ವಿವರಣೆಯನ್ನು ಕೊಡುತ್ತ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿ ಸಾಧಿಸಲು ಮುಂದಿನ ಮಹಾಚುನಾವಣೆಯಲ್ಲಿ ಕೊಂಗ್ರೆಸ್ ಹುರಿಯಾಳುಗಳು ಬಹುಮತದಿಂದ ಆರಿಸಿಬರುವಂತೆ ಕೊಂಗ್ರೆಸ್ ಪಕ್ಷಕ್ಕೇನೆ ಮತ ನೀಡಬೇಕೆಂದು ಜಿಲ್ಲೆಯ ಮತದಾರರನ್ನು ವಿನಂತಿಸಿಕೊಂಡಿದ್ದಾರೆ.

ನೃತ್ಯಕಲೋತ್ಸವ: ಇತ್ತೀಚೆಗೆ ಮಂಗಳೂರಲ್ಲಿ ಸ್ಥಾಪನೆಯಾಗಿರುವ ಲಲಿತಕಲಾಸದನದ ಪ್ರಥಮ ನೃತ್ಯಕಲೋತ್ಸವವು ಕಳೆದ ತಾ. 28ರಂದು ಸಾಯಂಕಾಲ ಮಂಗಳೂರು ನಗರಸಭಾಪತಿ ಶ್ರೀ| ಮಣೇಲ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಡೇರೆಬೈಲು ಕಿರಿಯ ಬುನಾದಿ ಶಾಲಾ ವಠಾರದಲ್ಲಿ ರಚಿತವಾದ ರಂಗಮಂಟಪದಲ್ಲಿ ಯಶಸ್ವಿಯಾಗಿ ಜರಗಿತು.

ಮೊಗರು ಗ್ರಾಮ ಯುವಕ ಮಂಡಳ, ನಾರಳ

ಅಷ್ಟಗ್ರಹಯೋಗ ಶಾಂತಿಗಾಗಿ ಮತ್ತು ಭಜನಾ ಮಂಡಲಿಯ ವಾರ್ಷಿಕೋತ್ಸವದ ಅಂಗವಾಗಿ, ನಾರಳ ಶ್ರೀ| ಸೀತಾರಾಮ ಭಜನಾ ಮಂದಿರದಲ್ಲಿ ತಾ. 23—1—62ರಿಂದ ತಾ. 3—2—62ರ ವರೆಗೆ 12 ದಿನವೂ ಭಜನೆ ನಡೆದು, ತಾ. 3ರಲ್ಲಿ ಮಂಗಲೋತ್ಸವ ಜರಗಿತು.

ರಾಸಾಯನಿಕದ ಸಹಾಯದಿಂದ ಸಸ್ಯಗಳು ವಿನಾಶಕಾರಿ ಕೀಟಗಳನ್ನು ಹಿಂತಿರುಗಿ ಕಚ್ಚಬಲ್ಲವು

ಯೂನಿವರ್ಸಿಟಿ ಪಾರ್ಕ್, ನ್ಯೂಮೆಕ್ಸಿಕೋ—ಸಸ್ಯಗಳು ತಮ್ಮನ್ನು ಕಾಡುವ ಕೀಟಗಳನ್ನು ಹಿಂತಿರುಗಿ ಕಚ್ಚುವ ಹಾಗೆ ರಾಸಾಯನಿಕಗಳನ್ನು ಅಮೆರಿಕದ ವಿಜ್ಞಾನಿಗಳು ಸಿದ್ಧಪಡಿಸಿದ್ದಾರೆ. ಸಿಸ್ಟಮಿಕ್ ಇನ್‌ಸೆಕ್ಟಿಸೈಡ್ ಎಂಬ ಹೆಸರಿನ ಈ ರಾಸಾಯನಿಕಗಳ ಸಂಖ್ಯೆಯೂ, ಸಾಮರ್ಥ್ಯವೂ ಹೆಚ್ಚುತ್ತಿದೆ. ಅಮೆರಿಕದ ವ್ಯವಸಾಯದ ಉತ್ಪನ್ನಗಳ ವರ್ಧನೆಕ್ಕೆ ಕಾರಣವಾದ ಅನೇಕ ವೈಜ್ಞಾನಿಕ ಹಾಗೂ ಆಡಳಿತದ ಅಂಶಗಳಲ್ಲಿ ಈ ಸಂಶೋಧನೆಯೂ ಒಂದು.

ಸಿಸ್ಟಮಿಕ್ ಇನ್‌ಸೆಕ್ಟಿಸೈಡುಗಳು ವಿಷಕಾರಕ ರಾಸಾಯನಿಕಗಳು. ಲೇಪಿಸಲಾದ ಇವುಗಳನ್ನು ಸಸ್ಯಗಳ ಬೇರುಗಳು ಕಾಂಡಗಳು ಅಥವ ಎಲೆಗಳು ಶೀಘ್ರಗತಿಯಿಂದ ಹೀರಿಕೊಳ್ಳುತ್ತವೆ. ಹೀರಿಕೊಂಡ ಸ್ಥಳದಿಂದ ಮೇಲಕ್ಕೇರಿ ಕುಡಿಗಳನ್ನು ತಲುಪಿದಾಗ ಅವುಗಳನ್ನು ತಿನ್ನಬರುವ ಕೀಟಗಳು ಸತ್ತುಹೋಗುತ್ತವೆ. ಅಂದರೆ ಸಸ್ಯಗಳನ್ನು ಹೀಗಿರುವ ಹಾಗೂ ಕಡಿದು ತಿನ್ನುವ ಕೀಟಗಳ ವಿರುದ್ಧ ಆತ್ಮರಕ್ಷಣೆ ಸಸ್ಯಗಳಿಗೆ ದೊರಕುತ್ತದೆ.

ಚುನಾವಣಾ ರಂಗ:

ಮದರಾಸು

ಮದರಾಸು ರಾಜ್ಯದ ವಿಸ್ತೀರ್ಣ—50,132 ಚದರ ಮೈಲುಗಳು; ಜನಸಂಖ್ಯೆ-33,650,917; ಮತದಾರರ ಸಂಖ್ಯೆ—187 ಲಕ್ಷ; ಲೋಕಸಭಾ ಸ್ಥಾನಗಳು-41; ಎಸೆಂಬ್ಲಿ ಸ್ಥಾನಗಳು-206. (ಮತದಾನ—ಫೆಬ್ರವರಿ ತಾ. 17, 19, 21 ಮತ್ತು 24).

ಮದರಾಸು ರಾಜ್ಯದಲ್ಲಿ ಕೊಂಗ್ರೆಸ್ಸು 205 ಎಸೆಂಬ್ಲಿ ಸ್ಥಾನಗಳಿಗೂ 40 ಲೋಕಸಭಾಸ್ಥಾನಗಳಿಗೂ ಹುರಿಯಾಳುಗಳನ್ನು ನಿಲ್ಲಿಸಿದೆ. ಲೋಕಸಭೆಗೆ ತಿರುಚೆಂದೂರ್ ಕ್ಷೇತ್ರದಿಂದ ಶ್ರೀ। ಟಿ. ಟಿ. ಕೃಷ್ಣಮಾಚಾರಿಯವರು ಅವಿರೋಧವಾಗಿ ಆರಿಸಿ ಬಂದಿರುವುದರಿಂದ ಕೊಂಗ್ರೆಸು ಹರುಷ ತಾಳಿದೆ; ಅವರನ್ನೆದುರಿಸಲಿದ್ದ ಸ್ವತಂತ್ರ ಪಕ್ಷದ ಹುರಿಯಾಳು ಹಿಂದೆಗೆದ ವಾರ್ತೆಯು ಸ್ವತಂತ್ರ ಪಕ್ಷದವರ ಒಂದು ಸೋಲು ಎಂದು ಕೆಲವರ ಅಂಬೋಣವಿದೆಯಾದರೂ, ಒಳಗಿಂದೊಳಗೆ ಕುತಂತ್ರ ನಡೆದು ಹೀಗಾಯಿತೆಂದೂ, ತೆರೆಯ ಮರೆಯ ಇಂಥ ಈ ಕೃತ್ಯವು ಕೊಂಗ್ರೆಸ್ಸಿಗೇ ಲಾಂಛನಾಸ್ಪದವೆಂದೂ ಸ್ವತಂತ್ರ ಪಕ್ಷದವರು ಛೀಮಾರಿ ಹಾಕುತ್ತಿರುವರು.

ಕಾಮರಾಜ ನಾಡರರ ಮುಖಂಡತ್ವದಲ್ಲಿ ಮದರಾಸು ರಾಜ್ಯದ ಮಂತ್ರಿ ಮಂಡಲವು ಬಿಕ್ಕಟ್ಟುಗಳಿಗೆಡೆಗೊಡದೆ, ಅಖಂಡವಾಗಿ ಸಾಗಿದೆಯೆಂದೂ, ರಾಜ್ಯವು ಪ್ರಗತಿಯ ದಾಖಲೆ ತೋರಿದೆಯೆಂದೂ ಬಹುಜನರ ತೃಪ್ತಿಯಿದೆ. ಎಂಟು ಮಂದಿ ಮಂತ್ರಿಗಳೀಗ ಚುನಾವಣೆಗೆ ಇಳಿದಿರುವರು; ಇಬ್ಬರು ಚುನಾವಣೆಯಿಂದ ದೂರವಿರುವರು.

ದ್ರಾವಿಡ ಮುನ್ನೇತ್ರ ಕಳಗಂ ಪಕ್ಷವು, ಮದರಾಸಿನಲ್ಲಿ ಕೊಂಗ್ರೆಸ್ಸಿನ ಪ್ರಾಮುಖ್ಯ ವಿರೋಧೀಪಕ್ಷ. ಈ ಪಕ್ಷದ ಮುಖಂಡರು ಜನಪ್ರಿಯತೆಗಳಿಸಿದವರು; ಇವರ ಸಭೆಗಳಿಗೆ ಬಹುಸಂಖ್ಯೆಯಲ್ಲಿ ಜನರೂ ಸೇರುತ್ತಿರುವರು. ಆದರೆ, ಕಳೆದ ಚುನಾವಣೆಗಳ ನಂತರ ಈ ಪಕ್ಷದೊಳಗೆ ಒಡಕಿದೆ. ಒಂದು ತಂಡವು ತಮಿಳು ರಾಷ್ಟ್ರೀಯ ಪಕ್ಷ ರಚಿಸಿದೆ. ಹಾಗಿದ್ದರೂ ಈ ಪಕ್ಷವು 143 ಎಸೆಂಬ್ಲಿ ಸ್ಥಾನಗಳಿಗೆ ಮತ್ತು 18 ಲೋಕಸಭಾ ಸ್ಥಾನಗಳಿಗೆ ತನ್ನ ಉಮೇದ್ವಾರರನ್ನು ನಿಲ್ಲಿಸಿದೆ.

ಶ್ರೀ। ರಾಜಗೋಪಾಲಾಚಾರಿಯವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದ ಸ್ವತಂತ್ರ ಪಕ್ಷವು, ಮದರಾಸು ವಿಧಾನಸಭೆಯಲ್ಲಿ ಕೊಂಗ್ರೆಸ್ಸಿಗೆ ವಿರೋಧಿ ಪಕ್ಷವಾಗುವ ಸಂಭವವಿಲ್ಲ. ಸ್ವತಂತ್ರ ಪಕ್ಷದಿಂದ 94 ಎಸೆಂಬ್ಲಿ ಸ್ಥಾನಗಳಲ್ಲೂ 16 ಲೋಕಸಭಾ ಸ್ಥಾನಗಳಲ್ಲೂ ಹುರಿಯಾಳುಗಳು ಸ್ಪರ್ಧಿಸುತ್ತಾರೆ. ಕೊಂಗ್ರೆಸ್ಸಿನಲ್ಲಿ ದಂಗೆಯೆದ್ದು ಹೊರಬಂದ ಹಲವರು ಸ್ವತಂತ್ರ ಪಕ್ಷದಲ್ಲಿದ್ದಾರೆ; ಕೆಲವರಂತೂ ಪ್ರಭಾವೀ ಮುಖಂಡರು. ಶ್ರೀ। ರಾಜಗೋಪಾಲಾಚಾರಿಯವರು ಮುಖ್ಯಮಂತ್ರಿಯಾಗಿದ್ದಾಗ, ಅವರನ್ನು ಅಧಿಕಾರಚ್ಯುತರನ್ನಾಗಿ ಮಾಡಲು ಒಟ್ಟುಗೂಡಿದ ಕೆಲವರೂ ಈಗ ರಾಜಗೋಪಾಲಾಚಾರಿಯವರ ಪಕ್ಷದಲ್ಲಿದ್ದಾರೆ. ಆದರೆ, ಈ ಒಂದೇ ಪಕ್ಷವು ಪ್ರಬಲ ವಿರೋಧೀ ಪಕ್ಷವಾಗುವಂತಿಲ್ಲ.

ಮದರಾಸಿನಲ್ಲಿ ಕಮ್ಯೂನಿಸ್ಟ್ ಪಕ್ಷವು ಪ್ರಬಲವಾಗಿಲ್ಲ; ಈಗಿನ ಎಸೆಂಬ್ಲಿಯಲ್ಲಿ ಉಪಸ್ಥಿತ ಕಮ್ಯೂನಿಸ್ಟ್ ಸದಸ್ಯರು ನಾಲ್ವರು ಮಾತ್ರ. ಸ್ಪರ್ಧೆಗೆ 68 ಎಸೆಂಬ್ಲಿ ಸ್ಥಾನಗಳಿಗೂ, 14 ಲೋಕಸಭಾ ಸ್ಥಾನಗಳಿಗೂ ಕಮ್ಯೂನಿಸ್ಟ್ ಹುರಿಯಾಳುಗಳಿದ್ದಾರೆ.

ಪ್ರಜಾ ಸೋಶಲಿಸ್ಟರು 21 ಎಸೆಂಬ್ಲಿ ಸ್ಥಾನಗಳಿಗೆ ಮತ್ತು 5 ಲೋಕಸಭಾ ಸ್ಥಾನಗಳಿಗೆ ತನ್ನ ಹುರಿಯಾಳುಗಳನ್ನು ನಿಲ್ಲಿಸಿದೆ.

ಫೊರ್ವರ್ಡ್ ಬ್ಲೊಕಿನಿಂದ ಎಸೆಂಬ್ಲಿಗೆ ಆರು ಮಂದಿ ಮತ್ತು ಲೋಕಸಭೆಗೆ ಒಬ್ಬ-ನಿಂತಿರುವರು. ತಮಿಳು ರಾಷ್ಟ್ರೀಯ ಪಕ್ಷದಿಂದ ಎಸೆಂಬ್ಲಿಗೆ—9; ಲೋಕಸಭೆಗೆ-1. ಮುಸ್ಲಿಂ ಲೀಗ್‌ನಿಂದ ಎಸೆಂಬ್ಲಿಗೆ—7; ಲೋಕಸಭೆಗೆ-2. ರಿಪಬ್ಲಿಕನ್ ಪಕ್ಷ ಎಸೆಂಬ್ಲಿಗೆ—3; ಲೋಕಸಭೆ-3.

“ನಾವು ತಮಿಳರು” ಎಂಬ ಪಕ್ಷವು 43 ಎಸೆಂಬ್ಲಿ ಸ್ಥಾನಗಳಲ್ಲಿ ಸ್ಪರ್ಧಾಳುಗಳನ್ನು ನಿಲ್ಲಿಸಿದೆ. ಸೋಶಲಿಸ್ಟ್ ಪಕ್ಷ ಮತ್ತು ಸೋಶಲಿಸ್ಟ್ ಮಜೂರ ಪಕ್ಷದವರು 14 ಎಸೆಂಬ್ಲಿ ಸ್ಥಾನಗಳಲ್ಲಿ ಸ್ಪರ್ಧಿಸುತ್ತಾರೆ.

ಪಕ್ಷ ರಹಿತ ಸ್ವತಂತ್ರ ಹುರಿಯಾಳುಗಳೇ ಮದರಾಸು ರಾಜ್ಯದಲ್ಲಿ ಅಧಿಕವಾಗಿ ಸ್ಪರ್ಧಿಸುತ್ತಾರೆ. ಎಸೆಂಬ್ಲಿಗೆ 228 ಮಂದಿ ಸ್ವತಂತ್ರರೂ, ಲೋಕಸಭೆಗೆ 151 ಮಂದಿಯೂ ಸ್ಪರ್ಧಿಸುವರು. ಭಾವೈಕ್ಯ ಸಾಧನೆ, ಚುನಾವಣಾ ನೀತಿ, ಜಾತ್ಯಾತೀತ ಧೋರಣೆ- ಇವೇನೂ ಮಾತುಗಳಿದ್ದರೂ—ಮದರಾಸಿನ ಮತದಾರರಲ್ಲಿ ಜಾತಿ ನೋಡಿ ಮತಹಾಕುವುದು ಕಡಿಮೆಯಿರದು.

——

ಆಂಧ್ರ

ಆಂಧ್ರಪ್ರದೇಶದ ವಿಸ್ತೀರ್ಣ-106,052 ಚದರ ಮೈಲುಗಳು; ಜನಸಂಖ್ಯೆ—35,977,999; ಮತದಾರರ ಸಂಖ್ಯೆ—1,89,85,000; ಲೋಕಸಭಾ ಸ್ಥಾನಗಳು—43; ಎಸೆಂಬ್ಲಿ ಸ್ಥಾನಗಳು—300; ಮತದಾನ—ಫೆಬ್ರವರಿ ತಾ. 19 ಮತ್ತು 21ರಿಂದ 25ರ ವರೆಗೆ.

ಆಂಧ್ರಪ್ರದೇಶದ ಕೊಂಗ್ರೆಸ್ಸಿನಲ್ಲಿ ಆಂತರಿಕ ಬಿಕ್ಕಟ್ಟು ಇದೆ; ಅಧಿಕಾರ ಸ್ಥಾನಕ್ಕಾಗಿ ಪೈಪೋಟಿಯಿದೆ. ಉಪಸ್ಥಿತ ಮುಖ್ಯಮಂತ್ರಿ ಶ್ರೀ। ಸಂಜೀವಯ್ಯನವರು ಚುನಾವಣೆಗೆ ನಿಂತಿದ್ದಾರೆ; ಹಾಗೇ, ಮಾಜಿ ಮುಖ್ಯಮಂತ್ರಿ ಮತ್ತು ಕೊಂಗ್ರೆಸ್ ಅಧ್ಯಕ್ಷ ಶ್ರೀ। ನೀಲಂ ಸಂಜೀವರೆಡ್ಡಿಯವರೂ ರಾಜಕೀಯಕ್ಕಿಳಿದಿದ್ದಾರೆ. ಮುಖಂಡತ್ವಕ್ಕಾಗಿ ಹೋರಾಟವಿದೆ.

ಈಗ, 301 ಸದಸ್ಯರಿರುವ ಅಲ್ಲಿಯ ಎಸೆಂಬ್ಲಿಯಲ್ಲಿ, 238 ಸದಸ್ಯರು ಕೊಂಗ್ರೆಸ್ ಪಕ್ಷೀಯರು; ಕಮ್ಯೂನಿಸ್ಟರು—37; ಸ್ವತಂತ್ರ ಪಕ್ಷ—12; ಪ್ರಜಾಸೋಶಲಿಸ್ಟರು—3; ನೇಮಕ-ಆಂಗ್ಲೋ ಇಂಡಿಯನ್—1; ಉಳಿದವರು ಪಕ್ಷರಹಿತ ಸ್ವತಂತ್ರರು.

43 ಲೋಕಸಭಾ ಸ್ಥಾನಗಳಲ್ಲಿ ಕೊಂಗ್ರೆಸ್—39: ಕಮ್ಯೂನಿಸ್ಟ್—4

ಈ ಬಾರಿ, ಆರುಮಂದಿ ಕೊಂಗ್ರೆಸ್ ಪಕ್ಷೀಯರು ಇಷ್ಟರೊಳಗೆ ಅವಿರೋಧವಾಗಿ ಆರಿಸಿಬಂದಿರುವರು. ಒಂದು ಮತದಾರ ಕ್ಷೇತ್ರದ ಹುರಿಯಾಳು (ಶ್ರೀ। ಆರ್. ನರಸಿಂಹ ರೆಡ್ಡಿ) ಕಳೆದವಾರ, ಜೀಪ್ ಅವಘಡದಲ್ಲಿ ಮೃತ್ಯುವಶರಾದರು. ಆ ಕ್ಷೇತ್ರದ ಒಂದು ಸ್ಥಾನದ ಚುನಾವಣೆ ಮುಂದುವರಿಸಲ್ಪಟ್ಟಿದೆ. ಉಳಿದ 293 ಎಸೆಂಬ್ಲಿ ಸ್ಥಾನಗಳಿಗೆ ಒಟ್ಟು 979 ಮಂದಿ ಸ್ಪರ್ಧಿಸುತ್ತಾರೆ. ಸ್ಪರ್ಧಾಳುಗಳ ವಿವರ, ಪಕ್ಷವಾರಾಗಿ, ಈ ಕೆಳಗಿನಂತಿದೆ:

ಕೊಂಗ್ರೆಸ್— 293; ಸ್ವತಂತ್ರ ಪಕ್ಷ-140; ಕಮ್ಯೂನಿಸ್ಟ್—135; ಜನಸಂಘ—70; ಸೋಶಲಿಸ್ಟರು—17; ಪ್ರಜಾ ಸೋಶಲಿಸ್ಟರು—16; ರಿಪಬ್ಲಿಕನರು—8; ಪಕ್ಷರಹಿತ ಸ್ವತಂತ್ರರು—299. (ಇವರಲ್ಲಿ 23 ಮಂದಿ ಮಹಿಳೆಯರು; ಇವರಲ್ಲಿ ಹದಿನಾರು ಮಂದಿ ಕೊಂಗ್ರೆಸ್.)

ಲೋಕಸಭೆಯ 43 ಸ್ಥಾನಗಳಿಗೆ 147 ಮಂದಿ ಸ್ಪರ್ಧಿಸುತ್ತಾರೆ; ಕೊಂಗ್ರೆಸ್—43; ಸ್ವತಂತ್ರ ಪಕ್ಷ—28; ಕಮ್ಯೂನಿಸ್ಟರು—21; ಜನಸಂಘ—8; ರಿಪಬ್ಲಿಕನ್—4; ಪ್ರ. ಸೋ.—1; ಪಕ್ಷರಹಿತ ಸ್ವತಂತ್ರರು—42. (ಇವರಲ್ಲಿ ಐವರು ಮಹಿಳೆಯರು; ಈ ಐವರು ಮಹಿಳೆಯರಲ್ಲಿ ಮೂವರು ಕೊಂಗ್ರೆಸ್.)

ಚುನಾವಣಾ ಹೋರಾಟ ನಡೆವ 293 ಎಸೆಂಬ್ಲಿ ಸ್ಥಾನಗಳ ಪೈಕಿ 84ರಲ್ಲಿ ನೇರ ಸ್ಪರ್ಧೆಯಿದೆ; 95ರಲ್ಲಿ ತ್ರಿಕೋಣ ಸ್ಪರ್ಧೆ; 114ರಲ್ಲಿ ಚತುಷ್ಕೋಣ ಅಥವಾ ಹೆಚ್ಚು. ಹಾಗೆಯೇ ಲೋಕಸಭಾ 43 ಸ್ಥಾನಗಳಲ್ಲಿ 7ರಲ್ಲಿ ಮಾತ್ರ ನೇರ ಸ್ಪರ್ಧೆಯಿದೆ; ಉಳಿದುವಲ್ಲಿ ಮೂವರು ಅಥವಾ ಹೆಚ್ಚು ಮಂದಿ ಇರುವರು.

ಈ ಮೊದಲು ಆಂಧ್ರ ಕೊಂಗ್ರೆಸ್ಸಿನ ಪ್ರಬಲ ವಿರೋಧಿಗಳು ಕಮ್ಯೂನಿಸ್ಟರಾಗಿದ್ದರು; ಈ ಬಾರಿ ಸ್ವತಂತ್ರ ಪಕ್ಷವು ಬಿರುಸಿನ ಹೋರಾಟಕ್ಕಿಳಿಯುತ್ತದೆ.

ಒಂಭತ್ತು ತೆಲಂಗಾನ ಜಿಲ್ಲೆಗಳಿಂದ ಕಮ್ಯೂನಿಸ್ಟರು ಸಶಕ್ತ ಹೋರಾಟ ಕೊಡುವರು.

ಡಾ। ಪಟ್ಟಾಭಿ ಸೀತಾರಾಮಯ್ಯ, ಕಲಾ ವೆಂಕಟರಾವ್ ಮತ್ತು ಆಂಧ್ರ ಕೇಸರಿ ಟಿ. ಪ್ರಕಾಶಂರವರ ನಿಧನದ ನಂತರ, ಪ್ರೊಫೆಸರ್ ಎನ್. ಜಿ. ರಂಗಾರವರು ಸ್ವತಂತ್ರ ಪಕ್ಷಸೇರಿದರು; ಆಂಧ್ರದಲ್ಲಿ ಅವರ ನಂತರ ಸಮರ್ಥ ಮುಖಂಡತ್ವ ಸ್ಥಿರವಾಗಿಲ್ಲ; ಅಲ್ಲಿಯ ರಾಜಕೀಯಗಳು ಪಕ್ಷನೀತಿ- ತತ್ವಗಳಿಗಿಂತ ಹೆಚ್ಚಾಗಿ ವ್ಯಕ್ತಿತ್ವದ ಸುತ್ತಲೂ ತಿರುಗಿವೆ. ಹೀಗಿದ್ದರೂ, ಎಲ್ಲ ಸ್ಥಾನಗಳಿಗೂ ಸ್ಪರ್ಧಾಳುಗಳನ್ನು ನಿಲ್ಲಿಸಿದುದು ಕೊಂಗ್ರೆಸ್ಸೇ; ಮತ್ತು ಈ ಪಕ್ಷವೇ ಅಧಿಕಸ್ಥಾನಗಳನ್ನು ಗೆಲ್ಲುವುದರಲ್ಲಿ ಅನುಮಾನವಿಲ್ಲ; ಕಳೆದ ಬಾರಿ (1957) ಕೊಂಗ್ರೆಸ್ಸು ಸೇಕಡಾ 80ರ ಬಹುಮತ ಹೊಂದಿತ್ತು; ಈ ಬಾರಿ ಮಾತ್ರ ಆ ಸಂಖ್ಯೆಯು ಅನುಮಾನಕರ.

——

ಮೈಸೂರು

ಮೈಸೂರು ರಾಜ್ಯದ ವಿಸ್ತೀರ್ಣ—74,122 ಚದರ ಮೈಲು; ಜನಸಂಖ್ಯೆ-23,547,081; ಮತದಾರರ ಸಂಖ್ಯೆ-120 ಲಕ್ಷ; ವಿಧಾನಸಭಾ ಸ್ಥಾನಗಳು-208; ಲೋಕಸಭಾ ಸ್ಥಾನಗಳು—26; ಮತದಾನ—ಫೆಬ್ರವರಿ, 19, 22 ಮತ್ತು 25.

ಬಿದರ, ಬಿಜಾಪುರ ಉತ್ತರ, ಬೆಳಗಾಂವಿ, ಕೊಪ್ಪಳ, ಚಿತ್ರದುರ್ಗ, ಉಡುಪಿ, ಬೆಂಗಳೂರು ನಗರ, ಚಾಮರಾಜನಗರ, —ಇವಿಷ್ಟು ಕ್ಷೇತ್ರಗಳಲ್ಲಿ ಫೆಬ್ರವರಿ ತಾ. 19ರಂದೂ; ಗುಲ್ಬರ್ಗ, ಬಿಜಾಪುರ ದಕ್ಷಿಣ, ಧಾರವಾಡ ದಕ್ಷಿಣ, ಮಂಗಳೂರು, ತಿಪಟೂರು, ಚಿಕ್ಕ ಬಳ್ಳಾಪುರ, ಬೆಂಗಳೂರು, ಮತ್ತು ಮಂಡ್ಯ—ಈ ಕ್ಷೇತ್ರಗಳಲ್ಲಿ ಫೆಬ್ರವರಿ ತಾ. 22ರಂದೂ; ಚಿಕ್ಕೋಡಿ, ಉತ್ತರ ಕನ್ನಡ, ಧಾರವಾಡ ಉತ್ತರ, ರಾಯಚೂರು, ಬಳ್ಳಾರಿ, ಶಿವಮೊಗ್ಗ, ಹಾಸನ, ತುಮಕೂರು, ಕೋಲಾರ, ಮತ್ತು ಮೈಸೂರು--ಈ ಕಡೆಗಳಲ್ಲಿ ಫೆಬ್ರವರಿ ತಾ. 25ರಂದೂ, ಮತದಾನ ನಡೆವುದು.

ಮೈಸೂರು ವಿಧಾನಸಭೆಯ 208 ಸ್ಥಾನಗಳಿಗೆ 677 ಮಂದಿ ಮತ್ತು ಲೋಕಸಭೆಯ 26 ಸ್ಥಾನಗಳಿಗೆ 88 ಮಂದಿ ಸ್ಪರ್ಧಿಸುತ್ತಾರೆ. ಕೊಂಗ್ರೆಸ್ಸು ಎಲ್ಲ ಸ್ಥಾನಗಳಿಗೆ ಹುರಿಯಾಳುಗಳನ್ನು ನಿಲ್ಲಿಸಿದೆ. ಈ ರಾಜ್ಯದಲ್ಲಿ ಕೊಂಗ್ರೆಸ್ಸಿಗೆ ಬಲವಾದ ವಿರೋಧಿ ಪಕ್ಷವು ಪ್ರಜಾ ಸೋಶಲಿಸ್ಟ್ ಪಕ್ಷ. ಪ್ರಜಾಸೋಶಲಿಸ್ಟ್ ಪಕ್ಷವು ಚಿತ್ರದುರ್ಗ, ಮೈಸೂರು, ತುಮಕೂರು, ಮಂಡ್ಯ, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಸಶಕ್ತವಿದೆಯೆನ್ನಲಾಗಿದೆ.

ಕೊಂಗ್ರೆಸ್ಸು, 1957ರ ಚುನಾವಣೆಗಳಲ್ಲಿ 208ರೊಳಗೆ 150 ಸ್ಥಾನಗಳನ್ನೂ ಲೋಕಸಭೆಯ 26ರಲ್ಲಿ 24ನ್ನೂ ಪಡೆದು ವಿಜಯ ಗಳಿಸಿತ್ತು. ಅನೇಕ ಸ್ಥಾನಗಳು ಅವಿರೋಧವಾಗಿ ದೊರೆತಿದ್ದುವು. ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಕೊಂಗ್ರೆಸ್ಸಿಗೆ ಎರಡು ಎಸೆಂಬ್ಲಿ ಸ್ಥಾನಗಳು (ಶ್ರೀ। ವೈ. ಮಂಜಯ್ಯ ಶೆಟ್ಟಿ—ಬೈಂದೂರು ಮತ್ತು ಶ್ರೀ। ಮಂಜಪ್ಪ ಉಳ್ಳಾಲ [ರಿಸರ್ವ್]—ಮೂಡಬಿದ್ರಿ) ಅವಿರೋಧವಾಗಿ ದೊರೆತವು. ಈ ಬಾರಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವಿರೋಧ ಆಯ್ಕೆಗಳೇ ಇಲ್ಲ. ಹುಣಸೂರು ಮತ್ತು ತಾಳಿಕೋಟೆ ಇವೆರಡು ಕಡೆಗಳಲ್ಲಿ ಮಾತ್ರ ಎರಡು ಅವಿರೋಧ ಆಯ್ಕೆಗಳಾಗಿವೆ.

(9ನೇ ಪುಟಕ್ಕೆ ಮುಂದುವರಿದಿದೆ).

ಮಕ್ಕಳಿದ್ದರೂ ಚಿಂತೆ, ಇಲ್ಲದಿದ್ದರೂ ಚಿಂತೆ! ಈ ಜಗತ್ತೇ, ಸದಾ ಚಿಂತೆಯ ಆಗರ!

47. ಸಂಸಾರದಲ್ಲಿರುವವರಿಗೆ ಅವರ ಮನಸ್ಸು ದೇವರಲ್ಲಿ ಮೆಚ್ಚುವ ತನಕ ಸತತವೂ ಇದ್ದೇ ಇರುತ್ತದೆ. ಹೀಗಾಗಿ, ಹೆಂಡತಿಯಿದ್ದರೂ (ಅವಳು ಕಾಡುವ) ಚಿಂತೆ, ಇಲ್ಲದಿದ್ದರೂ ಚಿಂತೆ. ಹೆಂಡತಿಯು ಬುದ್ಧಿಹೀನಳಾದರಂತೂ ಚಿಂತೆಯೇ ಚಿಂತೆ. ಅವಳೇನಾದರೂ ಭೂಲೋಕದಲ್ಲೇ ಅತೀ ಚೆಲುವೆಯಾದರೆ ಮಿತಿಮೀರಿದ ಮೋಹದ ಚಿಂತೆಯು ಇರುತ್ತದೆ. ಒಬ್ಬನಿಗೆ ಮಕ್ಕಳಿಲ್ಲದಿದ್ದರೂ ಚಿಂತೆ, ಮಕ್ಕಳಾದರೂ ಚಿಂತೆ ಮತ್ತು ಅವುಗಳನ್ನು ಪೋಷಿಸುವ ಚಿಂತೆಯೂ ಇರುತ್ತದೆ ಪ್ರೀತಿಯಿಂದ ದನಕರುಗಳನ್ನು ಕಾಯ್ದರೂ ವ್ಯಸನ ಬಿಟ್ಟು ಹೋಗದ ಚಿಂತೆಯೂ ಇರುತ್ತದೆ. ಬಡವನಾದರೆ ಹಣವಿಲ್ಲದ ಚಿಂತೆಯೂ, ಶ್ರೀಮಂತನಾಗಿ ಕೈತುಂಬ ಹಣವಿದ್ದರೆ ಅದನ್ನು ಕಾಯುವ ಚಿಂತೆಯು ಕಾಡುತ್ತವೆ. ಆದರೆ, ದೇವರನ್ನು ಬಿಡದೆ ಧ್ಯಾನಿಸಿದರೆ ನಿಶ್ಚಿಂತರಾಗಬಹುದು.

ಪುರಂದರದಾಸರು ಕಂಡ

ಲೋಕದ ರೀತಿನೀತಿಗಳು

ಡಾ। ವಿ. ಎ. ಶೆಣ್ಯೆ, ಬಿ.ಎಸ್‌ಸಿ. (ಒನರ್ಸ್), ಬಿ.ಎಸ್‌ಸಿ. (ಟೆಕ್), ಪಿ.ಎಚ್‌ಡಿ. (ಟೆಕ್)

ಪಂಚಶಿರನೆನಿಸಿದ ಬ್ರಹ್ಮನ ಒಂದು ತಲೆಯನ್ನು ಶಿವನು ಕಡಿದುದರಿಂದ, ಬ್ರಹ್ಮನಿಗೆ ಬಾಡಿ ಬಳಲುವ ಚಿಂತೆ. ರಾಮಭಕ್ತನಾದ ಹನುಮಂತನು ಮಂಗನಾದುದರಿಂದ ಅವನಿಗೂ ಚಿಂತೆ. ಮನ್ಮಥನಿಗೆ (ಶಿವನ ಹಣೆಗಣ್ಣಿನ ಬೆಂಕಿಯಿಂದ) ದೇಹವು ಸುಟ್ಟುಹೋದ ಚಿಂತೆ. ಮುಕ್ಕಣ್ಣನಾದ ಶಿವನಿಗೆ ತಿರಿದು ಉಣ್ಣುವ ಚಿಂತೆ. ಕಾಮಧೇನುವಿಗೆ ಯಾರಾದರೂ ಕರೆದೊಯ್ವರೆಂಬ ಚಿಂತೆ. ಕಾಮಿನಿಯರಿಗೆ ವಸ್ತ್ರದ ಚಿಂತೆ. ರಾಜನಿಗೆ ಪರರಾಜ್ಯಗಳ ಒಡೆಯರು ಧಾಳಿಯಿಟ್ಟಾರೆಂಬ ಚಿಂತೆ. ಪಾಮರರಿಗೆ ಓದು ಬರಹವಿಲ್ಲದ ಚಿಂತೆ. ಧರ್ಮಾತ್ಮರು ದೀನಜನರ ಅವಸ್ಥೆಯನ್ನು ಕಂಡು ಚಿಂತಿಸುತ್ತಾರೆ. ಕರ್ಮಾತ್ಮರಿಗೆ ಕೆಟ್ಟುಹೋಗುವ ಚಿಂತೆಯಿರುತ್ತದೆ. ಪರಾಕ್ರಮಶಾಲಿಗಳಿಗೆ ವೈರಿಗಳು ಕೊಂದಾರೆಂಬ ಚಿಂತೆಯೂ, ಬ್ರಾಹ್ಮಣನಿಗೆ ಮೃಷ್ಟಾನ್ನದ ಚಿಂತೆಯೂ ಕಾಡುತ್ತವೆ. ಭಕ್ತರಿಗೆ ಗುರುವಿನೊಡನೆ ಮುಕ್ತಿಯನ್ನು ಬೇಡುವ, ಮುಕ್ತರಾದವರಿಗೆ ಪರಮಾತ್ಮನನ್ನು ದೊರಕಿಸಿಕೊಳ್ಳುವ, ಯುಕ್ತಿಗಳನ್ನು ತಿಳಿದವನಿಗೆ ವಿವೇಕದಿಂದ ನಡೆಯುವ ಮತ್ತು ವಿರಕ್ತನಾದವನಿಗೆ ಕಾಮವನ್ನು ಸುಟ್ಟುಹಾಕುವ ಚಿಂತೆಗಳಿರುತ್ತವೆ. ಕ್ಷುದ್ರರಾದ ರಾಕ್ಷಸರಿಗೆ ಎಲ್ಲರನ್ನೂ ತಿನ್ನುವ ಚಿಂತೆಯೂ, ನಿದ್ರೆ ಬಾರದವನಿಗೆ ರಾತ್ರಿಯನ್ನು ಹೇಗೆ ಕಳೆಯಲೆಂಬ ಚಿಂತೆಯೂ, ಕದಿಯಲು ಹೋದವನಿಗೆ (ರಾತ್ರಿ ಕಳೆದು) ಕೋಳಿ ಕೂಗಿತೆಂಬ ಚಿಂತೆಯೂ ಕಾಡುತ್ತವೆ.

ಕಿವಿಗೆ ಓಲೆ ಇಲ್ಲದಿದ್ದರೂ ಚಿಂತೆ, ಇದ್ದರೂ ಅದನ್ನು ಕಾಯಬೇಕಲ್ಲ ಎಂಬ ಚಿಂತೆ. ವೇಳೆಗೆ ಸರಿಯಾಗಿ ಸಂಬಳವು ಬಾರದಿದ್ದರೆ ಚಿಂತೆ ಮತ್ತು ಸರಿಯಾಗಿ ಬಂದರೂ ಅದರಿಂದ ಬೇರೆ ಯಾವರು ಸಾಲ ಕೇಳಿಯಾರೆಂಬ ಚಿಂತೆ! ಸಂಬಳವು ತನಗೇ ಸಾಕಾಗದಿದ್ದರೆ, ಸಾಲವನ್ನು ಹೇಗೆ ಪಡೆಯಲಿ ಎಂಬ ಚಿಂತೆ! ನಿಲ್ಲಲಿಕ್ಕೆ ಮನೆಯಿಲ್ಲದಿದ್ದರೆ ಚಿಂತೆ. ಮನೆಯಿದ್ದರೆ ಸಂಬಂಧಿಕರು ಬಂದು ನಿಂತಾರೆಂಬ ಚಿಂತೆ. ಹಣವಿಲ್ಲದ ಚಿಂತೆಯೂ, ಆಪ್ತರಿಲ್ಲದ ಚಿಂತೆಯೂ, ಜೀವನವು ವ್ಯರ್ಥವಾಯಿತಲ್ಲ ಎಂಬ ಚಿಂತೆಯೂ, ಬಡವರಾದಾಗ ಸಹಾಯ ಮಾಡುವವರಿಲ್ಲದ ಚಿಂತೆಯೂ, ಸಂಸಾರಸಾಗರವನ್ನು ದಾಟಿಸುವವರಿಲ್ಲದೆ ಅದರಲ್ಲೆ ಅಡಿ ಮುಳುಗುವ ಚಿಂತೆಯೂ, ಕಡು ಪಾತಕಿಗಳೊಡಗೂಡಿ ಪತಿತರಾಗುವ ಚಿಂತೆಯೂ, ತಪ್ಪನ್ನು ಮನ್ನಿಸದ ರಾಜರ ಕೆಳಗೆ ಇರುವ ಚಿಂತೆಯೂ, ಸತಿ ಸುತ ಬಾಂಧವರನ್ನು ಸಲಹಬೇಕೆಂಬ ಚಿಂತೆಯೂ, ಬುದ್ಧಿಹೀನರಾದ ಹೀನಜನರ ಸಂಗಮಾಡಿದ ಚಿಂತೆಯೂ ಮಾನವನನ್ನು ಬಿಟ್ಟಿಲ್ಲ.

ದೇವರನ್ನು ನೆನೆವವರಿಗೆ ಯಾವ ಚಿಂತೆಯೂ ಇಲ್ಲ

48. ಆದರೆ, ದೇವರನ್ನು ನೆನೆದರೆ ನಿಶ್ಚಿಂತರಾಗಿರಬಹುದು. ಆದುದರಿಂದ ದೇವರನಾಮವನ್ನು ಜಪಿಸುವವರು ಯಾವುದಕ್ಕೂ ಚಿಂತಿಸಬೇಕಾಗಿಲ್ಲ. ಮತ್ತು ಸುಮ್ಮ ಸುಮ್ಮನೆ ಭ್ರಾಂತರಾಗಿಯೂ ಇರಬೇಕಾಗಿಲ್ಲ. ನಿಜಕ್ಕೂ, ಪ್ರಕೃತಿಯಲ್ಲಿ ಚಿಂತೆಗೆ ಎಡೆಯೆ ಇರುವುದಿಲ್ಲ. ಉದಾಹರಣೆಗಾಗಿ, ಪ್ರತಿದಿನವೂ ಬೆಳಗ್ಗೆ ವೇಳೆಯನ್ನರಿತು ಕೂಗುವ ಕೋಳಿಯು ತನ್ನ ಮರಿಗೆ ಮೊಲೆ ಕೊಟ್ಟು ಸಲಹುವುದಿಲ್ಲ; ಆದರೆ, ಆ ಮರಿಗಳು ಬೆಳೆಯುತ್ತವೆ. ಊರಿನಲ್ಲಿ ತಾಯಂದಿರು ಮಕ್ಕಳನ್ನು ಹೆರುವಾಗ ಸೂಲಗಿತ್ತಿಯರು ಅವರ ಶುಶ್ರೂಷೆಯನ್ನು ಮಾಡುತ್ತಾರೆ. ಆದರೆ ಕಾಡಿನ ಮೃಗಗಳು ಮರಿಗಳನ್ನು ಹಾಕುವಾಗ ಅಲ್ಲಿ ಯಾವ ಸೂಲಗಿತ್ತಿಯೂ ಇರುವುದಿಲ್ಲ. ಒಬ್ಬಳು ಒಂದು ಮಗುವನ್ನು ಹೆತ್ತಕೂಡಲೆ ಸತ್ತುಹೋದರೆ ಆ ಮಗುವು ಕೆಟ್ಟಿತೆಂದು ಲೋಕದ ಜನರು ಆಡುತ್ತಾರೆ. ಆದರೆ ಗುಂಗುರಿಗೆ ಅದರ ತಾಯಿಯು ಹತ್ತಿರ ಇದ್ದರೂ ಸಲಹುವುತಿಲ್ಲ. ಮಣ್ಣಿನ ಶಿಶುವನ್ನು ಮಾಡಿ ಹೊಟ್ಟೆಯೊಳಗೆ ಇರಿಸಬರುವುದಿಲ್ಲ. ಕೊಟ್ಟ ದೈವವೇ ಮಗುವನ್ನು ತೆಗೆದುಕೊಂಡು ಹೋದರೆ ಗೋಳೋ ಎಂದು ಏಕೆ ಅಳಬೇಕು? ಕಲ್ಲಿನೊಳಗಿನ ಕಪ್ಪೆಗೆ ನೀರು ಕೊಡುವ, ಎಲ್ಲ ಜೀವಕೋಟಿಗಳನ್ನು ಕಾಯುವ, ಆನೆಗೆ ಸಾಕಷ್ಟು ಆಹಾರವನ್ನು ತಂದುಕೊಡುವ, ದೇವರಿರುವಾಗ ಚಿಂತಿಸುವುದೇಕೆ? ದೇವರು ತನ್ನನ್ನು ಸೇರಿದವರನ್ನು ಎಂದೂ ಬಿಟ್ಟುಹಾಕುವುದಿಲ್ಲ. ಅವನ ಸ್ಮರಣೆಯನ್ನು ಮರೆಯದವನಿಗೆ ಇಹಲೋಕದಲ್ಲಿ ಸೂಖವೂ, ಪರಲೋಕದಲ್ಲಿ ಪರಮಪದವಿಯೂ ಲಭಿಸುವುವು. (ಸಶೇಷ)

——

ಚುನಾವಣಾಪ್ರಚಾರ ಭಾಷಣ: 'ಕೊಂಗ್ರೆಸ್ಸು ಲಾಭಕ್ಕಾಗಿ ದುಡಿಯುವ ವ್ಯಾಪಾರೀ ಸಂಸ್ಥೆಯಲ್ಲ. ಅದು ದೇಶದ ಜನತೆಯ ಸರ್ವತೋಮುಖ ಅಭಿವೃದ್ಧಿಯನ್ನು ಬಯಸಿ ಆ ಕರ್ತವ್ಯಪಾಲನೆಗಾಗಿ ದುಡಿಯುತ್ತಿರುವ ಸೇವಾ ಸಂಸ್ಥೆ' ಎಂದು ಬಳ್ಕುಂಜೆಯಲ್ಲಿ ಸೇರಿದ್ದ ಕೊಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಲೋಕಸಭಾ ಸದಸ್ಯ ಶ್ರೀ। ಯು. ಶ್ರೀನಿವಾಸ ಮಲ್ಯರು ಕಳೆದ ತಾ. 28ರಂದು ಭಾಷಣ ಮಾಡಿದರು. ಸಭಾಧ್ಯಕ್ಷತೆಯನ್ನು ವಿಧಾನಸಭಾ ಸದಸ್ಯ ಶ್ರೀ। ಎಫ್. ಎಕ್ಸ್. ಡಿ. ಪಿಂಟೊರವರು ವಹಿಸಿದ್ದರು.

——

ತುಳುಸಂಧಿಯ ಕತೆ-೧೯.

ಶಿವ-ಶಕ್ತಿ-ವಿಲಾಸ

ರಜತಾಚಲ ಗಿರಿಯಿಂದ ವ್ಯಾಪಿಸಲ್ಪಟ್ಟ ಕೈಲಾಸನಿಕೇತನದಲ್ಲಿ ಮಾರಹರನಾದ ಪಂಚಲಿಂಗೇಶ್ವರನು ಸಹಧರ್ಮಿಣಿಯಾದ ಪಾರ್ವತಿಯೊಂದೊಡಗೂಡಿಕೊಂಡಿದ್ದನು. ಅಪ್ಸರೆಯರ ಭಕ್ತಿಪುರಸ್ಸರವಾದ ನಾಟ್ಯ, ತನ್ಮಥ, ನಂದೀ ಭೃಂಗಿಗಳ ಉಪತಾಂಡವ ನೃತ್ಯ ಶಿವಸನ್ನಿಧಿಯಲ್ಲಿ ನಡೆಯುತ್ತಿತ್ತು. ಈ ಮೇಳವಣೆಯ ಹಿಂಬದಿಯಲ್ಲಿ ಭೂತಗಣದವರು ಮತ್ತು ಮುಂದುಗಡೆಯಲ್ಲಿ ದೇವಾಸುರರು ನೆರೆದಿದ್ದರು. ಭೂತನಾಥನು ತನ್ನ ತಾಂಡವನೃತ್ಯದಿಂದ ತಲ್ಲೀನನಾಗಿ ಕೆಲವೊಮ್ಮೆ ಅಂತರ್ಮುಖ ಜ್ಞಾನದಲ್ಲಿ ಸಮಾಧ್ಯಸ್ಥನಾಗಿ ಮಗದೊಮ್ಮೆ ಪಾರ್ವತಿದೇವಿಯೊಡನೆ ವಿರಾಜಿಸುತ್ತ ಸ್ಫಟಿಕ ಮಣಿಮಯ ಪೀಠದ ಮೇಲೆ ಗಣೇಶ ಸುಬ್ರಮಣ್ಯಾದಿಗಳೊಂದೊಡಗೂಡಿಕೊಂಡು ಪರಮ ಶಿವಮೂರ್ತಿಯಾಗಿ ಪಂಚಮುಖವುಳ್ಳವನಾಗಿ ದೇವಾಸುರರ ಗಮನವನ್ನು ಸೆಳೆಯುತ್ತಿದ್ದನು.

ಅಷ್ಟರಲ್ಲಿ ಈಶ್ವರನು ತನ್ನ ಮುಖಕ್ಕೆ ತನ್ನ ಕೈಯನ್ನು ಸ್ಪರ್ಶಿಸಿದನು ಅವನಿಗೆ ತನ್ನ ಮುಖದಲ್ಲಿ ಗಡ್ಡ ಮೀಸೆ ಬೆಳೆದುಕೊಂಡುದು ಅರಿವಾಯಿತು. ಅದಾಗಲೇ ನಿರುತ್ಸಾಹಜನಕವಾದ ಜಡತ್ವವೊಂದು ತನ್ನ ಅಂಗಾಂಗದಲ್ಲಿ ತಲೆದೋರಿಕೊಂಡಂತೆ ಅವನಿಗೆ ಭಾಸವಾಯಿತು.

"ತನ್ನ ಮುಖದಲ್ಲಿ ಕಲಿ ಬೆಳೆದುಕೊಂಡಿದೆಯಲ್ಲಾ! ಮುಖದ ಸೌಂದರ್ಯ, ಗಾಂಭೀರ್ಯವು ಹ್ರಾಸಗೊಂಡಿತಲ್ಲಾ! ನನ್ನ ಮುಖದ ಕಲೆಯನ್ನು ಯಾರು ಕಳೆಯಬಹುದು? ಮುಖಕ್ಷೌರ ಮಾಡಿ ಮುಖಕ್ಕೆ ಸಿರಿ ಒಡ್ಡಯಿಸಿ ಕಾಂತಿಯನ್ನು ಬಿಂಬಿಸಿಕೊಂಡವರು ಯಾರಿದ್ದಾರೆ?"

ಈಶ್ವರನಿಗೆ ತಟ್ಟನೇ ನೆನಪಾಯಿತು. ಮುಖದ "ಬೇಲೆ ಬೆನಪುನಾಯೆ" (ಕ್ಷೌರಮಾಡುವವ) ಗಟ್ಟದ ಮೇಲೆ ಇದ್ದನು; ಗಟ್ಟದ ಮೇಲೆ ಮೇಲ್ ರಾಜ್ಯ, ಆಚೆದಡದ ನಾಡು, ಈಚೆದಡದ ಕುದುರು ತುರ್ಕತೋಟ! ಇಲ್ಲಿ ವಾಸಿಸುವ ದೊಡ್ಡತಾಯಿ ಮಗ ಸಿದ್ದುಭಂಡಾರಿ, ಚಿಕ್ಕತಾಯಿ ಮಗ ಪೆರ್ನಭಂಡಾರಿ—ಇಬ್ಬರಲ್ಲಿ ಒಬ್ಬನಿಗೆ ಓಲೆಬರಿಯಬೇಕು: ಬರವಣಿಗೆಯ ಶಾನುಭೋಗನಿದ್ದನು. ಈಶ್ವರನು ಒಡನೇ ಆತನಿಗೆ ಘಳಿಗೆ ಸಂಖ್ಯೆಯಲ್ಲಿ ಬಂದು ಕಾಣಬೇಕೆಂದು ಆಳು ಬಿಟ್ಟನು.

ಹೋದ ಆಳನೊಡನೆ ಶಾನುಭೋಗನು ಬಂದನು. ಶಾನುಭೋಗ ತಗ್ಗಿ ವಿನಯದಿಂದ ಶಂಕರನಿಗೆ ಕೈಮುಗಿದನು. ತನ್ನ ಮುಖದಲ್ಲಿ ಕಲಿ ಬೆಳೆದುಕೊಂಡದ್ದನ್ನೂ, ಕ್ಷೌರಮಾಡಿಸಿಕೊಳ್ಳುವುದಕ್ಕಾಗಿ ಗಟ್ಟದಲ್ಲಿರುವ ಸಿದ್ದುಭಂಡಾರಿಯು ಬಂದುಕೊಳ್ಳುವಂತೆ ಅವನಿಗೆ ಒಂದು ಓಲೆ ಬರೆದುಕಳುಹಿಸಬೇಕೆಂದು ಶಾನುಭೋಗನಿಗೆ ಅಜ್ಞಾಪಿಸಿದನು.

ಬೆಟ್ಟನಲ್ಲಿರುವ ಬಿರುವ (ಬಿಲ್ಲವ)ನಿಗೆ ಕರೆಹೋಯಿತು. ಅವನು ತಕ್ಷಣ ಬಂದನು; ಉಪ್ಪರದ ಬೆಟ್ಟಿಗೆ ಅವನನ್ನು ಕಳುಹಿಸಿದರು. ಬಿಲ್ಲವ ಬೆಟ್ಟನಲ್ಲೊಂದು "ಗಜ್ಜರ್" (ಗಿಡ್ಡ) ತಾಳೆಮರಕ್ಕೆ ಏರಿದನು. ಕಟ್ಟೆ ಕಟ್ಟೆ ತಾಳೆಯ ತಳಿರು ಓಲೆಗರಿಗಳನ್ನು ಇಳಿಸಿದನು. ಆಳುಗಳು "ಕಾಂಡೆದ ನೆಯ್ಯದೊಂಬುಗು" (ಬೆಳಗಿನ ತಿಳಿ ಬಿಸಿಲಿಗೆ) ಓಲೆಗಳನ್ನು ಬಾಡಿಸಿದರು. ಕಟ್ಟದಲ್ಲಿ ಅತ್ಯುತ್ತಮವಾದ ಒಂದು ಓಲೆಗರಿಯನ್ನು ಹೆಕ್ಕಿ ತೆಗೆದರು. ಅದರ ಕೊನೆಯನ್ನು ಕತ್ತರಿಸಿದರು. ತುದಿಯನ್ನು ತುಂಡರಿಸಿದರು. ಹೊಟ್ಟೆಯ ನಾಳವನ್ನು ಕಳೆದರು. ಸರಿಮಟ್ಟಕ್ಕೆ ನೀಟುಮಾಡಿ ನಿಲ್ಲಿಸಿದರು. ಎಣ್ಣೆ ಮತ್ತು ಅರಸಿನಗಳನ್ನು ಒಟ್ಟಿಗೆ ಕಡಿದರು. ಈ ಮಿಶ್ರಣವನ್ನು ಓಲೆಗೆ ಬಳಚಿ ಪುಟಮಾಡಿದರು. ಶಾನುಭೋಗನಿಗೆ ಈ ಓಲೆ ಕೊಟ್ಟರು. ಶಾನುಭೋಗನು ಓಲೆಯ ಮೇಲೆ ಕಂಟಕದಿಂದ ಬರೆದನು:

"ಸಿದ್ದುಭಂಡಾರಿಗೆ: ಈ ಓಲೆ ನೋಡಿದ ಕ್ಷಣದಲ್ಲಿ ನೀನು ಉಂಡ ಊಟದಲ್ಲಿ, ತೊಟ್ಟ ವಸ್ತ್ರದಲ್ಲಿ ಈಶ್ವರದೇವರ ಸನ್ನಿಧಾನಕ್ಕೆ ಬರತಕ್ಕದು. ಈಶ್ವರದೇವರ ಮುಖದಲ್ಲಿ ಕಲಿ ಬೆಳೆದುಕೊಂಡಿದೆ. ನೀನು ಬಂದು ಕಲಿ ಕಳೆದು, ಸಿರಿ ಒಡ್ಡಯಿಸತಕ್ಕದು."

ಮೊದಲು ಓಲೆ ತೆಗೆದುಕೊಂಡು ಹೋಗುತ್ತಿದ್ದ "ಓಲೆದಬಗ್ಗ" (ಓಲೆಕಾರ) ಇದ್ದನು. ಅವನನ್ನು ಶಂಕರನು ಕರೆದನು. ವೃದ್ಧನಾದ ಓಲೆಕಾರನು ಬಂದು, ತನ್ನನ್ನು ಕರೆದ ಉದ್ದೇಶವೇನೆಂದು ದೇವನೊಡನೆ ಬದ್ಧಾಂಜಲಿಯುಕ್ತನಾಗಿ ನಿಂತು ವಿನಯದಿಂದ ವಿಜ್ಞಾಪಿಸಿಕೊಂಡನು.

"ಗಟ್ಟದ ಮೇಲಕ್ಕೆ ಈ ಓಲೆಯನ್ನು ತೆಕ್ಕೊಂಡು ಹೋಗಿ ಸಿದ್ದುಭಂಡಾರಿಗೆ ತಲಪಿಸು."

"ನನಗೆ ಏಳು ಹೋಗಿ ಎಪ್ಪತ್ತು ಶಕಗಳಾದವು. ನನಗೆ ಕಣ್ಣಿನ ದೃಷ್ಟಿ ತಪ್ಪಿದೆ. ಕಾಲಿನ ನಡತೆ ಸ್ತಗಿತವಾಗಿದೆ. ಅಂಗೈಯ ಬರಹ ಮಾಸಿಕೊಂಡಿದೆ. ದಾರಿಯ ಅಂತುಗೊತ್ತು ಗೊತ್ತಿಲ್ಲ. ನನಗೆ ಸಾಧ್ಯವಾಗದು, ದೇವಾ."

"ಏನು? ನಿನಗೆ ಸಂಬಳ ತಿನ್ನುವುದಕ್ಕೆ ಕೂಡುತ್ತದೆಯೋ? ಚಾಕರಿಮಾಡಲಿಕ್ಕೆ ಅಸಡ್ಡೆಯಲ್ಲವೇ?"

ಹೀಗೆಂದು ಕೋಪೋದ್ರೇಕಗೊಂಡ ಮಹಾಶಿವನು ಓಲೆಯನ್ನು ಓಲೆಕಾರನ ಸೆರಗಿನಲ್ಲಿ ಬಿಗಿದುಕಟ್ಟಿದನು. ಅವನಿಗೆ ದಾರಿಯ ಮತ್ತು ಮನೆಯ "ಬಾಟನೆ" (ಊಟ)ಯ ಖರ್ಚುಗಳನ್ನು ಕೊಟ್ಟನು. ಬಳಿಕ ಓಲೆಕಾರನ ಕುತ್ತಿಗೆಗೆ ಕೈಯಿಕ್ಕಿ ಹೊರದೊಬ್ಬಿದನು. ಗಾಳಿಯಲ್ಲಿ ತೂರಿ ಬೆರೆತುಕೊಂಡು ಸಾಗಿಹೋಗೆಂದು ಹೇಳಿದನು.

ಓಲೆಯ ಮಾಣಿಯು ಜನಮಂದಿಗಳು ಹೋಗುವ ಮಾರ್ಗದಲ್ಲಿ ನಡೆದನು. ಅದನ್ನು ಬಳಿಕ ಬಿಟ್ಟನು. ಕೋಣಗಳು ಹೋಗುವ "ಎದ್ದಡೆ" (ಕಾಲುದಾರಿ) ಯಲ್ಲಿ ನಡೆದನು. ಅದನ್ನು ಹಿಂದಕ್ಕೆ ತೆರವುಮಾಡಿ ಹೊರೆ ಇಳಿಸುವ ಚಪ್ಪಟೆ ಕಲ್ಲು ಇರುವ ಸ್ಥಳಕ್ಕೆ ಸಾಗಿದನು. ಅದನ್ನು ಸಹ ದಾಟಿ ಮುಂಬರಿದನು. ಉಪ್ಪು ಇಳಿಸುವ ಗುಂಡುಕಲ್ಲಿನ ದಾರಿಗೆ ತಲಪಿದನು. ಅದನ್ನು ತೊರೆದು ಒಳಗ ಧೂಪದ ಸಾಲುಮರಗಳು ಹರಡಿರುವ ಪ್ರದೇಶಕ್ಕೆ ಬಂದನು. ಅಲ್ಲಿಂದ ನಡೆದು ಜಾರಿಮರಗಳು ಬೆಳೆದುಕೊಂಡ ಕಾಡಿಗೆ ಬಂದನು. ಕುಂಟನೇರಳೆ ಪಾಡಿಗೆ ಮುಟ್ಟಿದನು. ಮಯೂರೋದ್ಯಾನಕ್ಕೆ ಬಂದನು. ಹರಿಣಗಳು ಸಂಚರಿಸುವ ಕಾಂಚನವನಕ್ಕೆ ಆಗಮಿಸಿದನು. ಅದನ್ನು ಅಗಲಿ ಮುಂದೆ ಹೋದನು. ಗಟ್ಟ ಹತ್ತಿದನು. ಓಲೆಯಲ್ಲಿ ನಮೂದಿಸಿದ ಗುರುತಿನ ಆಧಾರದ ಮೇಲಿಂದ ಆಚೆದಡದ ನಾಡು ಈಚೆದಡದ ಕುದುರು, ತುರ್ಕತೋಟಕ್ಕೆ ಸೇರಿದನು. ನಾಪಿತ—ಬಿನ್ನಾಣಗಾರ—ಚಿಕ್ಕತಾಯಿ ಮಗ—ಸಿದ್ದುಭಂಡಾರಿಯ ಮನೆಯ ಬೇಲಿಯ ಹೊರಮೈ, ತಡಮೆಯ ಒಳಮೈಯಲ್ಲಿ ನಿಂತು ಅವನ ಹೆಸರೆತ್ತಿ ಉಚ್ಚ್ವರಕ್ಕೆ ಮೂರು ಕರೆದನು. ಸಿದ್ದುಭಂಡಾರಿಯ ಹೆಂಡತಿ ಸಾಂತಮು ಒಂದಕ್ಕೆ "ಓರಿಯುಲ್" (ಗೊಣಗಿದಳು), ಎರಡಕ್ಕೆ ಕಿವಿ ನಿಗುರಿಸಿದಳು. ಮೂರಕ್ಕೆ ಹೊರಬಂದು ಮಾಣಿಯನ್ನು ವಿಚಾರಿಸಿದಳು:

"ಯಾರದು? ಏನಾಗಬೇಕು?"

"ನಾನು ಓಲೆಯ ಮಾಣಿ, ಬಿನ್ನಾಣಗಾರ ಕ್ಷೌರಿಕ ಇದ್ದಾನೆಯೋ?"

"ಎಲ್ಲಿಂದ ಬಂದ ಮಾಣಿ ನೀನು?"

"ಕೈಲಾಸ ನಿಕೇತನದಿಂದ ಪರಶಿವದೇವರ ಕರ್ಪಿನಿಂದ ಬಂದಂತಹ ಮಾಣಿ ನಾನು. ಸಿದ್ದುಭಂಡಾರಿ ಇದ್ದಾನೆಯೋ?"

"ಇರುವುದಕ್ಕೆ ಇದ್ದಾರೆ. ಊರು ಸಂಚರಿಸಿ, ಕ್ಷೌರವೃತ್ತಿ ಮಾಡಿ, ಆಸತ್ತು ಬೇಸತ್ತು ಬಂದು, ಮುಂಜಾನೆಯ ತುಪ್ಪ ಗಂಜಿ ಉಂಡು ಮಧ್ಯಾಹ್ನದ ಬಿಸಿಲು ನಿದ್ದೆಗೆ ಒರಗಿ ಮೈಮರೆತಿದ್ದಾರೆ."

"ಹಾಗಾದರೆ ತಕ್ಷಣಎಚ್ಚರಿಸತಕ್ಕದು"

"ಎಚ್ಚರಿಸುವ ಉಪಾಯ ನನಗರಿಯದು."

"ನನಗೆ ತಡವಾಗುತ್ತದೆ ನಿನಗೆ ಗೊತ್ತಾಗದಿದ್ದರೆ ನಾನೊಂದು ಉಪಾಯ ಹೇಳಿಕೊಡುತ್ತೇನೆ. ನಾಗದರ್ಬೆಯ ಕಡ್ಡಿ ತೆಗೆದುಕೊ. ಸಿರಿಗಿಂಡಿಯಲ್ಲಿ ನೀರು ಹಿಡಿ, ಅವನ ಎಡಗಡೆಯಿಂದ ಹೋಗಿ ಬಲಗಡೆ ಬಾ. ಕಡ್ಡಿಯನ್ನು ನೀರಿಗೆ ಮುಳುಗಿಸಿ, ಅದನ್ನು ಅವನ ತೊಡೆಯ ಮೇಲೆ ಗೀರು."

ಸಾಂತಮು ಹೋಗಿ ಗಂಡನಿಗೆ ಹಾಗೆಯೇ ಮಾಡಿದಳು. ಸಿದ್ದುಭಂಡಾರಿ ಗಾಬರಿಗೊಂಡು ದಡಬಡಿಸಿ ಎದ್ದನು. ಹೆಂಡತಿಗೆ ರೇಗಾಡಿದನು:

"ಯಾಕಾಗಿ ನನ್ನ ಚೆಲು ನಿದ್ದೆಯನ್ನು ಕೆಡಿಸಿದೆ ಹೆಣ್ಣೇ?"

"ನನ್ನ ಬುದ್ಧಿಯಿಂದ ನಾನು ಮಾಡಿದಲ್ಲ. ಕೈಲಾಸ ನಿಕೇತನದಿಂದ ಮಾಣಿ ಬಂದಿದ್ದಾನೆ......" ಹೀಗೆಂದು, ತಾನು ಮಾಣಿಯ ತರಾತುರಿಗಾಗಿ ಅವನು ಹೇಳಿಕೊಟ್ಟ ಉಪಾಯವನ್ನು ಕೃತಿಗಿಳಿಸಿದೆನೆಂದು ನಿವೇದಿಸಿದಳು.

ಇಷ್ಟು ಕೇಳಿದ ಸಿದ್ದುಭಂಡಾರಿ "ಅಂಡೆದೆನ್ ಅಂಡೆಗ್ ಕಟೊಂದು" (ಸೊಂಟದ ವಸ್ತ್ರವನ್ನು ಸೊಂಟಕ್ಕೆ ಬಿಗಿದು) "ಮುಂಡೆದೆನ್ ಮುಂಡೆಗ್ ಕಟೊಂದು" (ಮುಂಡೆಯ ವಸ್ತ್ರವನ್ನು ಮುಂಡೆಗ್ ಬಿಗಿದು) ಹೊರಗೆ ಬಂದನು ಮಾಣಿಗೆ ನುಡಿದನು:

"ಏನಾಗಬೇಕು ನಿನಗೆ, ಮಾಣಿ?"

"ನಾನು ಹೇಳುವುದಿಲ್ಲ, ಎಲ್ಲಾ ಓಲೆ ವಿವರಿಸುವುದು." ಈ ರೀತಿ ಹೇಳಿ ಮಾಣಿ, ತನ್ನ ಸೆರಗನ್ನು ಎಳೆದು, ಅದರೊಳಗಿದ್ದ ಓಲೆಯನ್ನು ಸಿದ್ದು ಭಂಡಾರಿಯ ಕೈಗೆ ಕೊಟ್ಟನು. ಸಿದ್ದು ಭಂಡಾರಿ ಓಲೆಯ ಬರವಣಿಗೆಯನ್ನು ಓದಿದನು. ಓಲೆಯನ್ನು ಮಡಿಚಿ ಮಾಣಿಯ ಕೈಗಿತ್ತು ಒರೆದನು:

"ಮಾಣೀ, ನೀನು ಮುಂದಿನಿಂದ ಹೋಗು. ನಿನ್ನ ಹಿಂದಿನಲ್ಲಿ ಘಳಿಗೆಯೇ ಹೊರಟು ಬರುತ್ತೇನೆ."

ಮಾಣಿ ಹೊರಟು ಹೋದ ಕೂಡಲೇ ಸಿದ್ದು ಭಂಡಾರಿ ಹೆಂಡತಿಯನ್ನು ಕರೆದು ಅವಳಿಗೆ ಹೀಗೆಂದನು:

"ಸಾಂತಮು, ಕೈಲಾಸ ನಿಕೇತನದಿಂದ ಮಹಾದೇವರ ಓಲೆ ಬಂದಿದೆ. ನನ್ನ ಬಕ್ಕಣ ತೆಗಿ. ಬಾಳು, ಕತ್ತರಿ, ನೀರಿನ ಬಟ್ಟಲು, ಹಾಲಿನ ಬಟ್ಟಲು, ಮುಖ ನೋಡುವ ಕೈಗನ್ನಡಿ, ಬಾಳು ಸಾಣೆ ಮಾಡುವ ಕಲ್ಲುಗಳನ್ನು ಬಕ್ಕಣದೊಳಗೆ ತುರುಕಿಸು."

ಸಾಂತಮು ಎಲ್ಲಾ ಸಾಮಾಗ್ರಿಗಳನ್ನು ಬಕ್ಕಣದೊಳಗೆ ತುರುಬಿ ಸಜ್ಜುಮಾಡಿದಳು. ಸಿದ್ದು ಭಂಡಾರಿ ಸರ್ವಾಲಂಕಾರ ಭೂಷಿತನಾಗಿ ಬಕ್ಕಣವನ್ನು ಎತ್ತಿಕೊಂ

ದನು. ಹೆಂಡತಿಗೆ ಈ ರೀತಿ ಬುದ್ಧಿ ನೀತಿ ಹೇಳಿದನು:

"ಜೋಕೆ ಜಾಗ್ರತೆಯಲ್ಲಿ ಇರು, ಸಾಂತವಸು. ನಾನು ಕೈಲಾಸನಿಕೇತನಕ್ಕೆ ಹೋಗಿ ಬರುತ್ತೇನೆ. ಮನೆಯ ಕಡೆ ಜಾಗ್ರತೆ ವಹಿಸು."

ಸಿದ್ದು ಭಂಡಾರಿ ಅಂಗಳಕ್ಕೆ ಇಳಿದನು. ಆಗ ಬಿರುಸಾದ ಗಾಳಿಯೊಂದು ಬಂದು ಅವನನ್ನು ಗಟ್ಟದ ಮೇಲಿನಿಂದ ಹಾರಿಸಿಕೊಂಡ್ಯೊಯ್ದು ಕೈಲಸನಿಕೇತನಕ್ಕೆ ತಂದು ಬಿಟ್ಟಿತು.

ಸಿದ್ದು ಭಂಡಾರಿ ಶಿವಸನ್ನಿಧಿಗೆ ಬಂದಾಗ, ಶಿವ ಪ್ರಭು ಅರಮನೆಯ ತೂಗುಯ್ಯಾಲೆಯಲ್ಲಿ ಕುಳಿತುಕೊಂಡಿದ್ದನು. ಪರಮೇಶ್ವರನಿಗೆ ಉದ್ದಂಡ ಪ್ರಣಾಮವನ್ನು ಮಾಡಿ ಕೈಜೋಡಿಸಿ ನಯಭಕ್ತಿಯಿಂದ ಹೀಗೆಂದು ಅರಿಕೆಮಾಡಿಕೊಂಡನು:

"ಪ್ರಭೋ, ಓಲೆಯ ಪ್ರಕಾರ ನಾನು ಬಂದುಕೊಂಡಿದ್ದೇನೆ. ಅಪ್ಪಣೆಯಾಗಬೇಕು, ಪ್ರಭೋ."

"ನನ್ನ ಮುಖದಲ್ಲಿ ಕಲಿ ಆವರಿಸಿಕೊಂಡಿದೆ. ಕ್ಷೌರಮಾಡಿ ಮುಖದಲ್ಲಿ ಸಿರಿ ಒಡ್ಡಯಿಸು. ನನಗೆ ಬೇಟೆಗೆ ಹೋಗಲುಂಟು. ತಡಮಾಡದೆ ಕ್ಷೌರಮಾಡು."

ಹೊರಜಗಲಿಯಲ್ಲಿ ಈಶ್ವರನು ಮಣೆಯ ಮೇಲೆ ಕೂತನು. ಕ್ಷೌರಿಕನು ಕನ್ನಡಿಯನ್ನು ಕೊಟ್ಟನು. ಒಂದು ಬಟ್ಟಲಲ್ಲಿ ನೀರು, ಇನ್ನೊಂದರಲ್ಲಿ ಹಾಲನ್ನು ಹಾಕಿದನು. ಬಳಿಕ ಈಶ್ವರನ ಮುಖಕ್ಷೌರವನ್ನು ಮಾಡಿ ಮುಗಿಸಿದನು. ಮುಖಕ್ಕೆ ಹಾಲನ್ನು ಸಿಂಪಡಿಸಿ ಸವರಿದನು. ಮುಖದ ಮೇಲಿನ ಕಲುಷ ಹೋಗಿ ಅಲ್ಲಿ ಕಾಂತಿಯುಕ್ತವಾದ ಸೌಂದರ್ಯವು ತಳತಳಿಸುವುದನ್ನು ಕನ್ನಡಿಯಲ್ಲಿ ಪ್ರತೀಕ್ಷಿಸಿದ ಈಶ್ವರನು ಪರಮಾನಂದವನ್ನು ಪಟ್ಟನು— ಸಿದ್ದು ಭಂಡಾರಿಗೆ ಸಂಬಳದೊಂದಿಗೆ ಉಡುಗೊರೆಯನ್ನಿತ್ತನು. ಮತ್ತೆ ಹೀಗೆಂದು ಕೇಳಿದನು.

"ಕ್ಷೌರಿಕನು ಮುಟ್ಟಿದ ದೋಷಕ್ಕೆ ಏನು ಶುದ್ಧ?"

"ಎಣ್ಣೆ ಪೂಸಿ ಶುದ್ಧ."

"ಎಣ್ಣೆಗೆ ಏನು ಶುದ್ಧ."

"ನೀರುಹೊಯ್ದು ಶುದ್ಧ."

ಕ್ಷೌರಿಕನನ್ನು ಕಳುಹಿಸಿಕೊಟ್ಟನು. ಬಳಿಕ ಈಶ್ವರನು ಸ್ನಾನಗೃಹಕ್ಕೆ ಹೋಗಿ ಸಾವಿರ ತಂಬಿಗೆ ತಣ್ಣೀರುಹೊಯ್ದು ತಂಪಾದನು. ಸಾವಿರ ತಂಬಿಗೆ ಬಿಸಿನೀರು ಹೊಯ್ದು ಬೆಚ್ಚನಾದನು. ಒಳಗೆ ಹೋಗಿ ಊಟಮಾಡಿದನು. ಚಾವಡಿಗೆ ಮರಳಿದಾಗ ಪಾರ್ವತಿ ಕೈಯಲ್ಲಿ ತಾಂಬೂಲದ ಹರಿವಾಣವನ್ನು ತಂದಳು. ಈಶ್ವರನು ತೂಗುಯ್ಯಾಲೆಯಲ್ಲಿ ಕೂತು ತಾಂಬೂಲ ಮೆದ್ದನು, ಪಾರ್ವತಿಗೆ ಅಂದನು:

"ಪಾರ್ವತೀ, ನಾನು ಮೃಗಬೇಟೆಗೆ ಹೋಗುತ್ತೇನೆ. ಜೋಕೆ ಜಾಗ್ರತೆಯಲ್ಲಿರು. ಅರಮನೆ ಕಡೆ ಎಚ್ಚರಿಕೆ ವಹಿಸು. ನಾನು ಬರುವಾಗ ತುಂಬಾ ದಿನಗಳು ಕಳೆಯಬಹುದು."

"ನೀವು ಬೇಟೆಗೆ ಹೋಗುವಿರಾದರೆ ನಿಮ್ಮ ಸಂಗಡ ನಾನೂ ಬರುವೆನು."

"ಗಂಡಸರು ಹೋಗುವ ಬೇಟೆಗೆ ಸ್ತ್ರೀಯರು ಬರಬಾರದು."

"ನೀವು ಬೇಟೆಗೆ ಹೋದವರು ಅಲ್ಲಿ "ಮಹಾಲೋಕವುಡೆ ತಿನುವರ್. ಪರಲೋಕ ಕೈಸೇರರ್." (ಕ್ಷುದ್ರ ಮಾನುಷ ಸ್ತ್ರೀಯ ಅಂಗಸಂಗಕ್ಕೆ ಸಿಲುಕಿ ಮತ್ತೆ ಅವಳೊಂದಿಗೆ ಸುಖಾನುಭವದಲ್ಲಿ ಮೈಮರೆತು ದಾಸನಾಗಬಹುದು)"

"ಇಲ್ಲ, ಪಾರ್ವತೀ! ಹಾಗೆ ನಾನು ವರ್ತಿಸುವುದಿಲ್ಲ. ನನ್ನಾಣೆ ಇದೆ, ನಿನ್ನಾಣೆಯುಂಟು, ಏನೊಂದು ಅಪ್ರಸಂಗವನ್ನು ಮಾಡುವುದಿಲ್ಲ." ಹೀಗೆ ಆಣೆಭಾಷೆ ಹಾಕಿದನು.

ಈಶ್ವರನು ಅಲಂಕರಿಸಿಕೊಂಡನು. ಬೇಟೆಯ ಶಸ್ತ್ರಾಸ್ತ್ರಗಳನ್ನು ಧರಿಸಿದನು. ತನ್ನ ವಾಹನವಾದನಂದಿಯನ್ನೇರಿದನು. ಬಿಳಿಯಸತ್ತಿಗೆಯನ್ನು ಹಿಡಿದುಕೊಂಡನು. ನಂದಿಯನ್ನು ಶರವೇಗದಲ್ಲಿ ಓಡಿಸಿದನು. ಅವನ ಹಿಂದಿನಲ್ಲಿ ಬೇಟೆಯ ಮಂದೆಯೂ ಅನುಸರಿಸಿತು.

ಈಶ್ವರನು ಕಣ್ಮರೆಯಾದನು. ಪಾರ್ವತಿಯ ಚಿತ್ತದಲ್ಲಿ ದಂಗೆ!

(ಸಶೇಷ)

——

ಶ್ರೀ ಶಾರದಾ ಮಾತೆಯವರ

ಕೆಲವು ಜೀವನ ಸ್ಮರಣೆಗಳು

ಶ್ರೀ ರಾಮಕೃಷ್ಣ ಪರಮಹಂಸರು ಶ್ರೀ ಮಾತೆಯವರ ಕುರಿತಾಗಿ ಹೀಗೆಂದಿರುವರು: "ಶಾರದಾಮಣಿಗೆ ಮಕ್ಕಳ ಭಾಗ್ಯವೊಂದಿಲ್ಲ ಎಂದು ತಿಳಿಯಬೇಡ. ಸಹಸ್ರ ಕಂಠಗಳಿಂದ "ಅಮ್ಮ, ಅಮ್ಮ" ಎಂದು ಕಿವಿ ಕಿವುಡಾಗುವಷ್ಟು ಕರೆಸಿಕೊಳ್ಳುವ ಅನಂತ ಸಂತಾನ ಅವಳ ಪಾಲಿಗೆ ಬರುವುದು."

o o o o

ಒಮ್ಮೆ ಪಾಪಜೀವನವನ್ನು ನಡೆಸಿ ಜಿಗುಪ್ಸೆಗೊಂಡ ಪತಿತೆಯೊಬ್ಬಳು ಜೀವನದಲ್ಲಿ ಶಾಂತಿಯನ್ನು ಪಡೆಯುವುದಕ್ಕಾಗಿ ಮಾತೆಯಿರುವಲ್ಲಿಗೆ ಬಂದಳು. ಆಗ ಅವರ ಬಳಿಯ ಶಿಷ್ಯರು ಅವಳನ್ನು ತಡೆದು, "ನಿನಗೆ ಮಾತೆಯ ದರ್ಶನವಾಗಲಾರದು; ಈಗಲೇ ಇಲ್ಲಿಂದ ಹೊರಡು" ಎಂದು ಗದರಿಸಿದಾಗ, ಮಾತೆ ಹೊರಗೆ ಬಂದು ಬಾಗಿಲ ಬಳಿ ನಿಂತು, ಪತಿತೆಯ ಕೈಹಿಡಿದು "ಬಾ ಅಮ್ಮ ಒಳಗೆ ಬಾ. ನಿರಾಶಳಾಗಬೇಡ. ನನ್ನ ಕಾಲನ್ನು ಮುಟ್ಟು. ಇಂದಿಗೆ ನೀನು ಪುನೀತಳು. ಇನ್ನು ಹಿಂದಿನ ವೃತ್ತಿಯನ್ನು ಪೂರ್ಣವಾಗಿ ಮನಸ್ಸಿನಿಂದ ತೊಡೆದು ಹಾಕು. ದೇವರ ಸ್ಮರಣೆ ಮಾಡು. ನಾನು ಕೊಡುವ ಮಂತ್ರವನ್ನು ಜಪಿಸು. ಆನಂದವಾಗಿ ಬಾಳು. ನಿನಗಿನ್ನು ಭಯವಿಲ್ಲ" ಎಂದು ಸಾಂತ್ವನಗೊಳಿಸಿ ಮಂತ್ರವನ್ನು ಉಪದೇಶಿಸಿದರು.

o o o o

ಪತಿತರಿಗೆ ಪಾಪಿಗಳಿಗೆ ಆಶ್ರಯಕೊಟ್ಟು ಅವರ ಪಾಪಗಳ ಫಲ ಕಟ್ಟಿಕೊಳ್ಳುವುದು ಯೋಗ್ಯವೇ ಎಂದು ಹಲವರು ಆಕ್ಷೇಪಿಸಿದಾಗ ಮಾತೆಯೆಂದರು: "ಅವರು ತಮ್ಮ ಪಾಪದ ಹೊರೆಯನ್ನು ಇಳಿಸಲು ಇಲ್ಲಿ ಬಾರದಿದ್ದಲ್ಲಿ ಮತ್ತೆಲ್ಲಿ ಹೋಗಬೇಕು? ನಾವು ಹುಟ್ಟಿರುವುದೇ ಅದಕ್ಕಾಗಿಯಲ್ಲವೇ? ಮಗು ಕೆಸರು ಬಳಿದುಕೊಂಡು ಮನೆಗೆ ಬಂದಾಗ ತಾಯಿ ಅದನ್ನು ತೊಳೆದು ಸ್ವಚ್ಛಗೊಳಿಸಿ ಎತ್ತಿ ಮುದ್ದಿಸುವುದಿಲ್ಲವೇ? ಶ್ರೀ ರಾಮಕೃಷ್ಣರು "ರಸಗುಲ್ಲಾ" ತಿನ್ನಲಿಕ್ಕೆ ಮಾತ್ರ ನಮಗೆ ಕಲಿಸಿಕೊಟ್ಟಿರುವುದಿಲ್ಲ."

o o o o

ಒಮ್ಮೆ ಅಡಿಗೆಯವನು ಅಡಿಗೆಮನೆಯನ್ನು ಗುಡಿಸಿ ಕಸಬರಿಕೆಯನ್ನು ಮೂಲೆಗೆ ಬಿಸಾಡಿದನು. ಆಗ ಮಾತೆಯವರು ಬೇಸರಗೊಂಡು ಹೇಳಿದರು: "ಕಸಬರಿಕೆಯನ್ನು ಹಾಗೇಕೆ ಬಿಸಾಡಿದೆ? ಅದಕ್ಕೂ ಮರ್ಯಾದೆಯಿದೆ. ಸೇವೆಯನ್ನು ಮಾಡಿದ ಆ ಕಸಬರಿಕೆಗೆ ಹೀನಾಯಮಾಡಬೇಡ. ಅದನ್ನು ಹಾಗೆ ಎತ್ತಿ ಸರಿಯಾದ ಸ್ಥಾನದಲ್ಲಿ ಮೆತ್ತಗೆ ಇಡಬೇಕು. ಅದಕ್ಕೂ ಗೌರವವಿದೆ."

o o o o

ಮನೆಮಾರು ತೊರೆದು ಸನ್ಯಾಸಿಗಳಾದ ಇಬ್ಬರು ತರುಣರು ಮಾತೆಯ ದರ್ಶನಕ್ಕಾಗಿ ಜಯರಾಮ ವಟಿಗೆ ಬಂದರು. ಅಲ್ಲಿಗೆ ಇನ್ನೂ ಅನೇಕ ಭಕ್ತರು ನೆರೆದಿದ್ದರು. ರಾತ್ರಿ ಊಟವಾದ ಮೇಲೆ ಮಾತೆಯವರು ಆ ಇಬ್ಬರು ಸನ್ಯಾಸಿಗಳನ್ನು ಒಳಗೆ ಬರಹೇಳಿದರು. ಅವರು ಬಂದೊಡನೇ ಮಾತೆಯು ಎರಡು ಲೋಟ ಹಾಲನ್ನು ಅವರಿಗೆ ಕೊಟ್ಟು ಸ್ವೀಕರಿಸುವಂತೆ ಹೇಳಿದರು. ಆಗ ಅವರು "ಅಮ್ಮ ನಮ್ಮ ಊಟ ಆಗಿದೆ. ನಮಗೆ ಪ್ರತ್ಯೇಕವಾದ ಈ ಉಪಚಾರವೇಕೆ?" ಎಂದು ಆಕ್ಷೇಪಿಸಿದಾಗ ಅವರೆಂದರು: "ಮನೆಯಲ್ಲಿ ಹಾಲು ಸ್ವಲ್ಪ ಕಡಿಮೆ. ಎಲ್ಲರಿಗೆ ಬಡಿಸಲಾಗಲಿಲ್ಲ. ಇತರ ಭಕ್ತರಿಗೆ ಅವರ ಮನೆಯಲ್ಲಿ ಬೇಕಷ್ಟು ಉಪಚಾರಮಾಡುತ್ತಾರೆ. ಮನೆಮಾರು ತೊರೆದು ಸನ್ಯಾಸಿಗಳಾದ ನಿಮಗೆ ಯಾರು ಉಪಚಾರ ಮಾಡುತ್ತಾರೆ? ತೆಗೆದುಕೊಳ್ಳಿ" ಎಂದರು.

o o o o

ಆಶ್ರಮದಲ್ಲಿ ಒಂದು ಬೆಕ್ಕು ಯಾವಾಗಲೂ ಠಾಕೂರರ ನೈವೇದ್ಯದ ವಸ್ತುಗಳನ್ನು ಕದ್ದು ತಿನ್ನುತ್ತಿತ್ತು. ಹೀಗಾಗಿ, ಸನ್ಯಾಸಿಯೊಬ್ಬರು ಅದನ್ನು ಸಿಕ್ಕಿದಲ್ಲಿ ಹೊಡೆದು ಓಡಿಸುತ್ತಿದ್ದರು. ಮಾತೆಯವರು ಅದನ್ನು ಕಂಡಾಗಲೆಲ್ಲ, "ಯಾಕೆ ಆ ಬೆಕ್ಕನ್ನು ಹೊಡೆಯುತ್ತೀಯಾ? ಹೊಟ್ಟೆ ಪಾಡಿಗೆ ಕಂಡಲ್ಲಿ ಅದು ತಿಂಡಿಗೆ ಬಾಯಿ ಹಾಕುತ್ತದೆ" ಎಂದು ಆಗಾಗ ತಡೆಯುತ್ತಿದ್ದರು. ಒಮ್ಮೊಮ್ಮೆ ಅವರು ತಾವೇ ಅದಕ್ಕೆ ನೈವೇದ್ಯದ ಕ್ಷೀರವನ್ನು ತಿನ್ನಿಸಿದ್ದುಂಟು. ಆಶ್ರಮವನ್ನು ಬಿಟ್ಟು ಪ್ರಯಾಣಕ್ಕೆ ಹೊರಟು ನಿಂತಾಗ ಮಾತೆಯವರು ಆ ಸನ್ಯಾಸಿಯನ್ನು ಕರೆದು, "ನೋಡಪ್ಪಾ, ಆ ಬೆಕ್ಕನ್ನು ಉಪವಾಸ ಕೆಡವಬೇಡ. ಹೊತ್ತುಹೊತ್ತಿಗೆ ಆಹಾರ ಕೊಡು. ಅದನ್ನು ಕೋಲಿನಿಂದ ಹೊಡೆಯಬೇಡ. ನೋಡು! ಆ ಬೆಕ್ಕಿನಲ್ಲಿ ನಾನಿದ್ದೇನೆಂದು ತಿಳಿ" ಎಂದರು.

o o o o

ಒಂದು ದಿನ ಸನ್ಯಾಸಿಯೊಬ್ಬನು ಕಾಯಿಗಳನ್ನು ಹೊತ್ತಿರುವ ನೆಲ್ಲಿಯ ಗೆಲ್ಲನ್ನು ಮುರಿದು ತಂದನು. ಆಗ ಮಾತೆಯವರು ನೊಂದುಕೊಂಡು ಹೀಗೆ ಹೇಳಿದರು: "ನೋಡು. ಕಾಯಿ ಬಿಟ್ಟಿರುವ ಗೆಲ್ಲನ್ನು ಮುರಿಯಬಾರದಪ್ಪ. ಅದರಲ್ಲಿಯೂ ನೆಲ್ಲಿಯ ಮರದ ಗೆಲ್ಲು ಮುರಿಯಲೇಬಾರದು. ನೆಲ್ಲಿಯ ಮರದಡಿಯಲ್ಲಿ ಎಲ್ಲಾ ದೇವತೆಗಳ ವಾಸವಿದೆ. ಅದರ ಕೆಳಗೆ ಜಪಧ್ಯಾನಗಳನ್ನು ಮಾಡಿದರೆ, ಬೇಗನೆ ಉತ್ತಮ ಫಲ ಸಿಕ್ಕುವುದು. ಅದರ ಎಲೆಗಳನ್ನು ಬಿಲ್ವದಳಗಳ ಬದಲಿಗೆ ಶಿವನ ಅರ್ಚನೆಗೆ ಉಪಯೋಗಿಸಬಹುದು." ಹೀಗೆಂದು ಅದರ ಎಲೆಗಳನ್ನು ಆ ದಿನದ ಪೂಜೆಗೆ ಎತ್ತಿಕೊಡು ಎಂದು ಶಿಷ್ಯನಿಗೆ ಹೇಳಿದರು.

(ಸಶೇಷ)

——

ಶಾಲಾ ವಾರ್ಷಿಕೋತ್ಸವ: ಬೈಲೂರು ಬೋರ್ಡ್ ಹೈಸ್ಕೂಲಿನ ವರ್ಧಂತ್ಯುತ್ಸವವು ಕಾರ್ಕಳ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ| ಎಸ್. ಮೋಹನದಾಸ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಯಶಸ್ವಿಯಾಗಿ ಜರಗಿತು.

——